

MAG(2) PRB/CR/70/2022-23 REG NO: KARKAN27951

# ಮುಂಜಾನೆ ವಾರ್ತೆ

MUNJANE VARTHE

ಇ–ಪೇಪರ್: www.munjaneevartheepaper.com

EDITOR: H.L.AMARANATH

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

Volume: 02 Issue: 95 | ಸಂಪುಟ: 02 | ಸಂಚಿಕೆ: 95 | ಪುಟಗಳು: 04 | munjanevarthe | 17 FRIDAY MAY 2024 | 17 ಶುಕ್ರವಾರ ಮೇ 2024 | ₹ 2



ಜಾಹೀರಾತಿಗಾಗಿ ಸಂಪರ್ಕಿಸಿ

9663122276

website: munjanevarthe.com



ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ.ನಿಂದ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ — ವಿವರಪುಟ 02

ಮದ್ದೂರು ಮೆಡಿಕಲ್ ಆಸ್ಪತ್ರೆಯಲ್ಲಿ ರೋಗಿ ಸಾವು 8 ಲಕ್ಷ ದಂಡ — ವಿವರಪುಟ 03

ಪಟ್ಟಣದ ಚಿಕನ್ ಕಬಾಬ್ ಅಂಗಡಿಗಳ ಮೇಲೆ ದಾಳಿ — ವಿವರಪುಟ 04


# ಸಿಎಎ ಮೋದಿ ಗ್ಯಾರಂಟಿಗೆ ತಾಜಾ ಉದಾಹರಣೆ



ಹತ್ತು ವರ್ಷಗಳ ಹಿಂದೆ ಜನರು ದೇವರ ಭರವಸೆಯಲ್ಲಿ ಬದುಕುತ್ತಿದ್ದರು. ಕೆಲವು ಕಡೆ ಬಾಂಬ್ ದಾಳಿ, ಕೆಲವು ಕಡೆ ಸ್ಲೀಪರ್ ಸೆಲ್, ಕೆಲವು ಕಡೆ ಕೋಮು ಘರ್ಷಣೆ, ಇನ್ನೂ ಕೆಲವು ಕಡೆ ಭಯೋ ತ್ಪಾದನೆಯಿಂದ ಸಂಕಷ್ಟ ಪರಿಸ್ಥಿತಿ ಇತ್ತು. ಸಾವಿರಾರು ತಾಯಂದಿರು ತಮ್ಮ ಮಕ್ಕಳನ್ನು ಕಳೆದುಕೊಂಡರು. ಈ ಹಿಂದಿನ ಸರ್ಕಾರಗಳು ಇಂತಹ ಜನರಿಗೆ ಸಹಕಾರ ನೀಡುತ್ತಿದ್ದವು. ಈಗಲೂ ನಿಮ್ಮ ಮೀಸಲಾತಿಯನ್ನು ಕಿತ್ತು ಸಮುದಾಯವೊಂದಕ್ಕೆ ನೀಡಲು ಚಿಂತಿಸಿವೆ. ಬಜೆಟ್ 15% ಅಲ್ಪಸಂಖ್ಯಾತರ ಹೆಸರಿನಲ್ಲಿ ಹೋಗುತ್ತಿದೆ.

ಲಕ್ನೋ: ಮೋದಿ ಗ್ಯಾರಂಟಿಗೆ ತಾಜಾ ಉದಾಹರಣೆ ಸಿಎಎ. ಸಿಎಎ ಅಡಿಯಲ್ಲಿ ಪೌರತ್ವ ಪ್ರಮಾಣ ಪತ್ರ ನೀಡಲು ಆರಂಭಿಸಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಉತ್ತರ ಪ್ರದೇಶದ ಲಾಲ್‌ಗಂಜ್‌ನಲ್ಲಿ ಮಾತನಾಡಿದ ಅವರು, ವಿದೇಶಗಳಿಂದ ಬಂದಿರುವ ಅಲ್ಪಸಂಖ್ಯಾತರು ನಮ್ಮ ದೇಶದಲ್ಲಿದ್ದಾರೆ.

ಧರ್ಮದ ಆಧಾರದ ಮೇಲೆ ದೇಶ ಹಂಚಿಕೆಯಾದಾಗ ಬಲಿಯಾದವರು ಇವರು.

ಅವರು ಯಾವಾಗ ಬೇಕಾದರೂ ಬರಬಹುದು ಎಂದು ಗಾಂಧೀಜಿ ಹೇಳಿದ್ದರು. ಆದರೆ ಕಾಂಗ್ರೆಸ್ ಈ ಜನರ ಬಗ್ಗೆ ಗಮನಿಸಿಲ್ಲ.

ಇಲ್ಲಿನ ಮತ ಬ್ಯಾಂಕ್‌ಗಾಗಿ ಗಮನಿಸಿಲ್ಲ. ದಲಿತ, ಓಬಿಸಿ ಸಮುದಾಯದ ಜನರು ಕಷ್ಟದಲ್ಲಿದ್ದರು. ಅವರನ್ನು ಕರೆತರುವ ಕೆಲಸ ನಾವು ಮಾಡಿದ್ದೇವೆ ಎಂದರು.

ಹತ್ತು ವರ್ಷಗಳ ಹಿಂದೆ ಜನರು ದೇವರ ಭರವಸೆಯಲ್ಲಿ ಬದುಕುತ್ತಿದ್ದರು. ಕೆಲವು ಕಡೆ ಬಾಂಬ್ ದಾಳಿ, ಕೆಲವು ಕಡೆ ಸ್ಲೀಪರ್ ಸೆಲ್, ಕೆಲವು ಕಡೆ ಕೋಮು ಘರ್ಷಣೆ, ಇನ್ನೂ ಕೆಲವು ಕಡೆ ಭಯೋ ತ್ಪಾದನೆಯಿಂದ ಸಂಕಷ್ಟ ಪರಿಸ್ಥಿತಿ ಇತ್ತು. ಸಾವಿರಾರು ತಾಯಂದಿರು ತಮ್ಮ ಮಕ್ಕಳನ್ನು ಕಳೆದುಕೊಂಡರು.

ಈ ಹಿಂದಿನ ಸರ್ಕಾರಗಳು ಇಂತಹ ಜನರಿಗೆ ಸಹಕಾರ ನೀಡುತ್ತಿದ್ದವು. ಈಗಲೂ ನಿಮ್ಮ ಮೀಸಲಾತಿಯನ್ನು ಕಿತ್ತು ಸಮುದಾಯವೊಂದಕ್ಕೆ ನೀಡಲು ಚಿಂತಿಸಿವೆ. ಬಜೆಟ್ 15% ಅಲ್ಪಸಂಖ್ಯಾತರ ಹೆಸರಿನಲ್ಲಿ ಹೋಗುತ್ತಿದೆ.

70 ವರ್ಷಗಳಿಂದ ಹಿಂದೂ–ಮುಸ್ಲಿಂ ರಾಜಕೀಯ ಮಾಡಿವೆ. ನಾವು ಒಂದಾಗಿ ಹೋಗಬೇಕು.

ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ತಿಳಿಸಿದರು.

# 29ಕ್ಕೆ ಮುಂಗಾರು ಪ್ರವೇಶ

ನವದೆಹಲಿ: ಕಳೆದ ವರ್ಷ ಮಳೆ ಕೊರತೆಯಿಂದ ಬರಗಾಲ ಎದುರಿಸುತ್ತಿರುವ ಜನರಿಗೆ ಹವಾಮಾನ ಇಲಾಖೆ ಸಿಹಿಸುದ್ದಿ ನೀಡಿದೆ. ಈ ಬಾರಿ ಮುಂಗಾರು ಮುಂಚಿತವಾಗಿಯೇ ಆಗಮಿಸಲಿದ್ದ ಸಮೃದ್ಧವಾಗಿ ಸುರಿಯಲಿದೆ ಎಂದು ಹೇಳಿದೆ.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ಈ ವರ್ಷ ಸಮಯಕ್ಕಿಂತ ಮುಂಚಿತ ವಾಗಿಯೇ ಮುಂಗಾರಿನ ಆಗಮನವಾಗಲಿದೆ. ನೈಋತ್ಯ ಮುಂಗಾರು ಮೇ 31ಕ್ಕೆ ಕೇರಳ ತಲುಪುವ ನಿರೀಕ್ಷೆಯಿದೆ. ಇದಕ್ಕೂ ಮುನ್ನ ಮೇ 19ರಂದು ಅಂಡಮಾನ್ ನಿಕೋಬಾರ್ ತಲುಪುವ ಸಾಧ್ಯತೆಯಿದೆ. ನಂತರ ದೇಶದ ಇತರ ಭಾಗಗಳತ್ತ ಸಾಗಲಿದೆ. ಈ ಕುರಿತು ಬುಧವಾರ ರಾತ್ರಿ ಮಾಹಿತಿ ನೀಡಿರುವ ಇಲಾಖೆ, ಇದೇ 31ಕ್ಕೆ ಕೇರಳ ರಾಜ್ಯವನ್ನು ಮುಂಗಾರು ಪ್ರವೇಶಿಸಲಿದ್ದು, ನಾಲ್ಕು ದಿನ ಹೆಚ್ಚೂ ಕಡಿಮೆ ಆಗಬಹುದು. ಆದರೆ ಈ ಬಾರಿಯ ನಾಲ್ಕು ತಿಂಗಳ ಮಳೆಗಾಲ ಕೃಷಿ ಆಧಾರಿತ ಭಾರತದ ಆರ್ಥಿಕತೆಗೆ ಚೈತನ್ಯ ನೀಡಲಿದೆ ಎಂದು ಹೇಳಿದೆ.

ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಪ್ರತಿಕ್ರಿಯಿಸಿ, "ಕೇರಳದಲ್ಲಿ ಮಾನ್ಸೂನ್ ಪ್ರಾರಂಭವಾಗುವ ಸಾಮಾನ್ಯ ದಿನಾಂಕ ಜೂನ್ 1 ಆಗಿರುವು ದರಿಂದ ಇದು ಆ ದಿನಕ್ಕೆ ಹತ್ತಿರವಾಗಿದೆ. ಅಲ್ಲದೇ ಈ ಬಾರಿ ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ದಾಖಲಾಗಬಹುದು ಎಂದು ಕಳೆದ ತಿಂಗಳು ನಮ್ಮ ಇಲಾಖೆ ಹೇಳಿತ್ತು. ಅದಕ್ಕೆ ಪೂರಕವಾಗಿ ಮುಂಗಾರು ಚಲನೆ ಕಂಡುಬಂದಿದೆ" ಎಂದು ತಿಳಿಸಿದ್ದಾರೆ.

ಕೇರಳದಲ್ಲಿ ಮುಂಗಾರು ಪ್ರವೇಶದ ಸಮಯವು ಕಳೆದ 150 ವರ್ಷಗಳಿಂದ ಬದಲಾಗುತ್ತಿದೆ. 1918ರಲ್ಲಿ ಮುಂಗಾರು ಮೇ 11ರಂದುರಾಜ್ಯ ಪ್ರವೇಶಿಸಿತ್ತು. ನಂತರದಲ್ಲಿ 1972 ಜೂನ್ 18, 2020ರ ಜೂನ್ 1, 2021ರ ಜೂನ್ 3, 2022ರಲ್ಲಿ ಮೇ 29, ಕಳೆದ ವರ್ಷ ಜೂನ್ 8ರಂದು ಮುಂಗಾರು ಮಳೆಯ ಪ್ರವೇಶವಾಗಿತ್ತು.



ಶ್ರೀ ಕ್ಷೇತ್ರ ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಭೇಟಿ ನೀಡಿ, ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮುಖಂಡರುಗಳು ಉಪಸ್ಥಿತರಿದ್ದರು.

# ಆಪರೇಷನ್ ಕಮಲ ಅವಶ್ಯಕತೆಯಿಲ್ಲ

ಹುಬ್ಬಳ್ಳಿ: ಬಿಜೆಪಿ ಆಪರೇಷನ್ ಕಮಲ ಮಾಡುವ ಅವಶ್ಯಕತೆಯಿಲ್ಲ. ಕಾಂಗ್ರೆಸ್‌ನವರ ಕಚ್ಚಾಟದಿಂದಲ್ಲೇ ಸರ್ಕಾರ ಬಿದ್ದು ಹೋಗಬಹುದು ಎಂದು ಮಾಜಿ ಸಿಎಂ ಜಗದೀಶ್ ಶೆಟ್ಟರ್ ಭವಿಷ್ಯ ನುಡಿದರು.

ನಗರದಲ್ಲಿಂದು ಮಾತನಾಡಿದ ಅವರು, ಸಿಎಂ, ಡಿಸಿಎಂ ನಡುವೆ ಸಮನ್ವಯದ ಕೊರತೆಯಿದೆ. ನಮ್ಮವರು ಯಾರೂ ಹೋಗಲ್ಲ ಎಂದು ಸಿದ್ದರಾಮಯ್ಯ ಅವರು ಹೇಳುತ್ತಿದ್ದಾರೆ. ಸರ್ಕಾರ ಗಟ್ಟಿ ಮುಟ್ಟಾಗಿದೆ ಎಂದರೆ ಏನು ಅರ್ಥ. ಈ ಹಿಂದೆ 17 ಜನ ಹೋದಾಗ ಸಿದ್ದರಾಮಯ್ಯ ಅವರು ಏನ್ ಹೇಳಿದ್ರು ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರದಲ್ಲಿ ಒಳಬೇಗುದಿ ಜಾಸ್ತಿಯಿದೆ. ಇದು ಸರ್ಕಾರದ ಪತನಕ್ಕೂ ಕಾರಣವಾಗಬಹುದು. ಇತ್ತೀಚೆಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆಯವರು ಹೇಳಿದ್ದಾರೆ. ನಾನು ಕೂಡಾ ಮೂರು ತಿಂಗಳ ಹಿಂದೆ ಹೇಳಿದ್ದೇನೆ ಎಂದರು.

ಅಂಜಲಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, "ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಆಡಳಿತ ವೈಫಲ್ಯ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುತ್ತಿಲ್ಲ. ನೇಹಾ ಕೊಲೆಯಾದ ಬಳಿಕ ಪೊಲೀಸರು ಎಚ್ಚೆತ್ತುಕೊಳ್ಳಬೇಕಿತ್ತು. ಆದರೆ ಈ ಪ್ರಕರಣವನ್ನು ಸುಲಭವಾಗಿ ತೆಗೆದುಕೊಂಡಿದ್ದಾರೆ. ಆರೋಪಿ ಮನೆ ಹೊಕ್ಕು ಅಂಜಲಿ ಹತ್ಯೆ ಮಾಡಿದ್ದು, ಜನ ಭಯ ಭೀತರಾಗಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ಇದಕ್ಕೆ ಸಿಎಂ ಹಾಗೂ ಡಿಸಿಎಂ ಜವಾಬ್ದಾರಿ ಎಂದು ಆರೋಪಿಸಿದರು.

ಬಳಿಕ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಶೆಟ್ಟರ್ ಪ್ರಜ್ವಲ್‌ರೇವಣ್ಣ ಪ್ರಕರಣದಲ್ಲಿ ನಮ್ಮ ಸ್ಟ್ಯಾಂಡ್ ಕ್ಲಿಯರ್ ಇದೆ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ. ಹೀಗಾಗಿ ನಾವು ಪ್ರಕರಣವನ್ನು ಸಿಬಿಐಗೆ ವರ್ಗಾವಣೆ ಮಾಡಿ ಅಂತಿದ್ದೇವೆ. ಆದರೆ ಇದರಲ್ಲಿ ರಾಜಕಾರಣ ಮಾಡಬಾರದು. ಮೈತ್ರಿಗೂ ಪ್ರಜ್ವಲ್ ರೇವಣ್ಣಗೂ ಸಂಬಂಧವಿಲ್ಲವೆಂದರು.

ಈ ಲೋಕಸಭಾ ಚುನಾವಣೆಯಲ್ಲಿ ಬೆಳಗಾವಿಯಿಂದ ನಾನು ಗೆದ್ದು ಬರ್ತಿನಿ. ಈಗ ಒಂದು ವಾರ ಕಾಲ ನಾನು ದೆಹಲಿ ಪ್ರಚಾರಕ್ಕೆ ತೆರಳುತ್ತಿದ್ದೇನೆ. ಇನ್ನು ಮಾಜಿ ಶಾಸಕ ರಘುಪತಿ ಭಟ್ ಅವರಿಗೆ ಟಿಕೆಟ್ ನೀಡಬೇಕಿತ್ತು. ನಾನು ಅವರ ಜೊತೆಗೆ ಮಾತನಾಡುತ್ತೇನೆ. ಅವರಿಗೆ ಅನ್ಯಾಯ ಆಗಿರೋದು ನಿಜ, ನಾನು ಒಪ್ಪಿಕೊಳ್ಳುತ್ತೇನೆ ಎಂದು ಶೆಟ್ಟರ್ ತಿಳಿಸಿದರು.

# ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್‌ಗೆ ತೀವ್ರ ವಿರೋಧ

ತುಮಕೂರು: ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ನಾಲಾ ಯೋಜನೆ ವಿರೋಧಿಸಿ ಗುಬ್ಬಿ ತಾಲ್ಲೂಕು ಡಿ.ರಾಂಪುರ ಬಳಿ ಇರುವ ಕಾಮಗಾರಿ ಸ್ಥಳದಲ್ಲಿ ಹಮ್ಮಿಕೊಂಡಿದ್ದ ಹೋರಾಟಕ್ಕೆ ಪಕ್ಷಾತೀತವಾಗಿ ಸಾವಿರಾರು ರೈತರು ಭಾಗವಹಿಸಿ ಬೆಂಬಲ ಸೂಚಿಸಿದರು.

ಮಾಜಿ ಸಚಿವರಾದ ಸೊಗಡು ಶಿವಣ್ಣ ನೇತೃತ್ವದಲ್ಲಿ ಜಿಲ್ಲೆಯ ವಿವಿಧ ಮಠಾಧೀಶರ ಸಾನಿಧ್ಯ ಹಾಗೂ ಶಾಸಕರು, ಮಾಜಿ ಶಾಸಕರು, ರೈತ ಸಂಘಟನೆಗಳ ಮುಖಂಡರು, ಸ್ಥಳೀಯ ರೈತರು ಮತ್ತು ಅಪಾರ ಸಂಖ್ಯೆಯ ಸಾರ್ವಜನಿಕರು ಈ ಹೋರಾಟದಲ್ಲಿ ಭಾಗವಹಿಸಿ ಎಕ್ಸ್‌ಪ್ರೆಸ್ ಕೆನಾಲ್ ಮುಚ್ಚುವವರೆಗೂ ನಮ್ಮಗಳ ಹೋರಾಟ ನಿಲ್ಲುವುದಿಲ್ಲ ಎಂದು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

> ತುಮಕೂರು ಗ್ರಾಮಾಂತರ ಶಾಸಕ ಬಿ.ಸುರೇಶ್ ಗೌಡ ಮಾತನಾಡಿ ಜಿಲ್ಲೆಯಲ್ಲಿ ಸಾವಿರಾರು ಜನ ಹೋರಾಟ ಮಾಡಿ ತುಮಕೂರು ಜಿಲ್ಲೆಗೆ ಹೇಮಾವತಿ ತಂದಿದ್ದಾರೆ, ಅದರಲ್ಲಿ ವೈ.ಕೆ.ರಾಮಯ್ಯ, ಎಸ್.ಮಲ್ಲಿಕಾರ್ಜುನಯ್ಯ, ಸೊಗಡು ಶಿವಣ್ಣ ಹಾಗೂ ಇನ್ನಿತರೆ ನಾಯಕರ ಹೋರಾಟದ ಫಲವಾಗಿ ಜಿಲ್ಲೆಗೆ ಹೇಮಾವತಿ ನೀರು ಹರಿಯುತ್ತಿದೆ.

ಪ್ರತಿಭಟನೆಯನ್ನುದ್ದೇಶಿಸಿ ಮಾಜಿ ಸಚಿವ ಸೊಗಡು ಶಿವಣ್ಣ ಮಾತನಾಡಿ ತುಮಕೂರು ಜಿಲ್ಲೆಗೆ 24.5 ಟಿಎಂಸಿ ಹೇಮಾವತಿ ನೀರು ಹಂಚಿಕೆಯಾಗಿದೆ, ಹಂಚಿಕೆಯಾಗಿರುವ ನೀರನ್ನೇ ಜಿಲ್ಲೆಯ ಜನರು ಪಡೆಯಲು ಸಾಧ್ಯವಾಗುತ್ತಿಲ್ಲ, ಈ ಮಧ್ಯೆ ಯಾವುದೇ ಡಿಪಿಆರ್ ಯೋಜನೆ ಮಾಡದೇ ಅನುಮೋದನೆ ಪಡೆಯದೇ ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಯೋಜನೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೂ ಈ ಯೋಜನೆ ಮುಂದುವರೆಯಲು ಬಿಡುವುದಿಲ್ಲ, ಮೊದಲು ಜಿಲ್ಲೆಯ ರೈತರ ಹಿತ ಕಾಪಾಡುವುದು ಅತೀ ಮುಖ್ಯ, ಸ್ವಹಿತಾಸಕ್ತಿಗಾಗಿ ರೂಪಿಸುತ್ತಿರುವ ಈ ಯೋಜನೆ ಜಿಲ್ಲೆಯ ರೈತರ ಪಾಲಿಗೆ ಮರಣಶಾಸನವಾಗಲಿದೆ, ಈ ಯೋಜನೆಯ ಸ್ಥಗಿತವಾಗುವವರೆಗೂ ಹೋರಾಟ ನಿರಂತರವಾಗಿರುತ್ತದೆಂದರು.

# 'ಬರ ಪರಿಹಾರ ರೈತರಿಗೆ ತಲುಪುತ್ತಿಲ್ಲ'

ಬೆಂಗಳೂರು: ಯಾವ ಕಡೆಯಿಂದ ನೋಡಿದರೂ ರೈತರ ಸಂಕಷ್ಟಕ್ಕೆ ಕೊನೆಯೇ ಇಲ್ಲ ಎನ್ನುವಂತಾಗಿದೆ. ಹೆಸರಿಗೆ ಅನ್ನದಾತ.., ಆದರೆ, ಅವರ ಕಣ್ಣೀರು ಒರೆಸಿ ಅವರಿಗೆ ಧಾತನಾಗಿ ನಿಲ್ಲಬೇಕಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ ಕೈಕಟ್ಟಿ ಕೂತಿದೆ" ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮೂಲಕ ಆಕ್ರೋಶ ಹೊರಹಾಕಿರುವ ಕುಮಾರಸ್ವಾಮಿ, "ಕೇಂದ್ರ ಸರ್ಕಾರದಿಂದ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಿದ್ದ ಬರ ಪರಿಹಾರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿರುವ ಬ್ಯಾಂಕ್‌ಗಳ ವರ್ತನೆ ನಿಜಕ್ಕೂ ಕ್ರೂರಾತಿ ಕ್ರೂರ, ಖಂಡನೀಯ. ಹಣ ರೈತರಿಗೆ ತಲುಪುತ್ತಿಲ್ಲ. ಮೊದಲೇ ತೀವ್ರ ಬರ, ಬೆಳೆನಾಶದಿಂದ ಕಂಗೆಟ್ಟಿರುವ ರೈತರ ಕಣ್ಣಲ್ಲಿ ರಕ್ತ ಕಣ್ಣೀರು ತರಿಸುವ ಅಮಾನವೀಯ ಕ್ರಮ ಇದು ಎಂದರೆ ತಪ್ಪಲ್ಲ" ಎಂದು ಕಿಡಿಕಾರಿದ್ದಾರೆ.

ಬಗ್ಗೆ ಗಂಭೀರವಾಗಿ ಚರ್ಚೆ ನಡೆಸಬೇಕು ಎಂದು ಹೇಳಿದರು.

# 'ಯಾರದ್ದೋ ತಪ್ಪಿಗೆ ಪಿಒಕೆ ತಾತ್ಕಾಲಿಕವಾಗಿ ಕೈತಪ್ಪಿದೆ'




ನವದೆಹಲಿ: ಪಾಕ್ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದ ಮೇಲಿನ ನಿಯಂತ್ರಣದ ನಷ್ಟವು "ಯಾರದ್ದೋ ದೌರ್ಬಲ್ಯ ಅಥವಾ ತಪ್ಪಿನಿಂದ" ಸಂಭವಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ.

ಇಲ್ಲಿ ಸಚಿವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಮತ್ತು ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಉಲ್ಲೇಖಿಸದೆ ಈ ಮಾತು ಹೇಳಿದ್ದಾರೆ. 'ವಿಶ್ವಬಂಧು ಭಾರತ್' ಎಂಬ ಶೀರ್ಷಿಕೆಯ ಕಾರ್ಯಕ್ರಮವೊಂದರಲ್ಲಿ, ಭಾರತವು 'ಲಕ್ಷ್ಮಣ ರೇಖಾ'ವನ್ನು ದಾಟಿದರೆ ಮತ್ತು ಪಿಒಕೆ ಅನ್ನು ಭಾರತದ ಒಕ್ಕೂಟಕ್ಕೆ ಸಂಯೋಜಿಸಿದರೆ, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ ಪಾಕಿಸ್ತಾನ ಆಕ್ರಮಿತ ಗಿಲ್ಗಿಟ್ ಬಾಲ್ಟಿಸ್ತಾನ್ ಮೂಲಕ ಹಾದು ಹೋ ದರೆ ಚೀನಾ ದಿಂದ ಸಂ ಭಾವ್ಯ ಪ್ರತಿಕ್ರಿ ಯೆ ಯ ಬಗ್ಗೆ ಜೈಶಂಕರ್ ಅವರನ್ನು ಕೇಳಲಾಯಿತು.

ಬಾಹ್ಯ ವ್ಯವಹಾರಗಳು ಭಾರತದ ಕಾರ್ಯಗಳನ್ನು ಸೀಮಿತಗೊಳಿಸುವ 'ಲಕ್ಷ್ಮಣ ರೇಖಾ' ಕಲ್ಪನೆಯನ್ನು ತಳ್ಳಿಹಾಕಿದವು."ಲಕ್ಷ್ಮಣ ರೇಖಾ' ನಂತಹ ಯಾವುದೇ ವಿಷಯವಿದೆ ಎಂದು ನಾನು ನಂಬುವುದಿಲ್ಲ.

ಪಿಒಕೆ ಭಾರತದ ಒಂದು ಭಾಗ ಎಂದು ನಾನು ಭಾವಿಸುತ್ತೇನೆ ಮತ್ತು ಯಾರದೋ ದೌರ್ಬಲ್ಯ ಅಥವಾ ತಪ್ಪಿನಿಂದಾಗಿ ಅದು ತಾತ್ಕಾಲಿಕವಾಗಿ ನಮ್ಮಿಂದ ದೂರ ಸರಿದಿದೆ.

ಚೀನಾದ ಮಾಜಿ ರಾಯಭಾರಿಯಾಗಿ ತಮ್ಮ ಅನುಭವವನ್ನು ಬಳಸಿಕೊಂಡ ಜೈಶಂಕರ್, ವಿಶೇಷವಾಗಿ ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್‌ಗೆ ಸಂಬಂಧಿಸಿದಂತೆ ಬೀಜಿಂಗ್‌ನ ಪಾಕಿಸ್ತಾನದ ಸಹಯೋಗವನ್ನು ಟೀಕಿಸಿದರು.

ನಾನು ಚೀನಾದ ರಾಯಭಾರಿಯಾಗಿದ್ದೆ. ನಾವೆಲ್ಲರೂ ಚೀನಾದ ಹಿಂದಿನ ಕ್ರಮಗಳ ಬಗ್ಗೆ ತಿಳಿದಿದ್ದೇವೆ ಮತ್ತು ಅದು ಪಾಕಿಸ್ತಾನದೊಂದಿಗೆ ಕೈಜೋಡಿಸುತ್ತಿದೆ. ಅದರ ಹಳೆಯ ಇತಿಹಾಸ.

ಈ ಭೂಮಿಯನ್ನು ಪಾಕಿಸ್ತಾನವಾಗಲೀ ಅಥವಾ ಚೀನಾವಾಗಲೀ ತಮ್ಮದೆಂದು ಹೇಳಿಕೊಳ್ಳುವುದಿಲ್ಲ ಎಂದು ನಾವು ಅವರಿಗೆ ಪದೇ ಪದೇ ಹೇಳುತ್ತಿದ್ದೆವು.

ಯಾವುದೇ ಸಾರ್ವಭೌಮ ಹಕ್ಕುದಾರರಿದ್ದರೆ, ಅದು ಭಾರತ. ನೀವು ಆಕ್ರಮಿಸಿಕೊಂಡಿದ್ದೀರಿ, ನೀವು ಅಲ್ಲಿ ನಿರ್ಮಿಸುತ್ತಿದ್ದೀರಿ, ಆದರೆ ಕಾನೂನು ರೀತಿಯಲ್ಲಿ ಅದು ನನ್ನದು" ಎಂದು ಅವರು ಹೇಳಿದರು.


ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
17 FRIDAY MAY 2024
17 ಶುಕ್ರವಾರ ಮೇ 2024

# ಧಾರವಾಡ ಜಿಲ್ಲೆಯ 66 ಗ್ರಾಮಗಳಲ್ಲಿ 144 ಸೆಕ್ಷನ್ ಜಾರಿ: ಡಿಸಿ

ಧಾರವಾಡ: ಜಿಲ್ಲೆಯ 66 ಗ್ರಾಮಗಳಲ್ಲಿ ಮೇ 16ರಿಂದ ನಿಷೇಧಾಜ್ಞೆ ಜಾರಿ ಮಾಡಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಆದೇಶ ಹೊರಡಿಸಿದ್ದಾರೆ.

ಮಲಪ್ರಭಾ ಬಲದಂಡೆ ಕಾಲುವೆಯಿಂದ ಬರುತ್ತಿರುವ 600 ಕ್ಯುಸೆಕ್ಸ್ ನೀರಿನ ವಿಚಾರವಾಗಿ ಯಾವುದೇ ಗ್ರಾಮದಲ್ಲಿ ಸೌಹಾರ್ದತೆಗೆ ಮತ್ತು ಶಾಂತಿಗೆ ಧಕ್ಕೆ ಬರಬಾರದೆಂಬ ಕಾರಣಕ್ಕೆ ಜಿಲ್ಲಾಧಿಕಾರಿಗಳು ಈ ಆದೇಶ ಹೊರಡಿಸಿದ್ದಾರೆ.

ಬರಗಾಲದಿಂದ ತತ್ತರಿಸಿರುವ ಧಾರವಾಡ ಜಿಲ್ಲೆಯ ಜನರಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ ಹಾಗೂ ಜಿಲ್ಲೆಯ ಹಲವೆಡೆ ಉಂಟಾಗಿರುವ ನೀರಿನ ಹಾಹಾಕಾರ ತಪ್ಪಿಸುವ ಉದ್ದೇಶಕ್ಕಾಗಿ ಧಾರವಾಡ ಜಿಲ್ಲೆಯ 58 ಕೆರೆಗಳನ್ನು ಭರ್ತಿ ಮಾಡುವ ನಿರ್ಧಾರವನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಕೈಗೆತ್ತಿಕೊಂಡಿದ್ದಾರೆ.



ನವಲಗುಂದ ತಾಲೂಕಿನ 37, ಅಣ್ಣಿಗೇರಿಯ 13, ಹುಬ್ಬಳ್ಳಿಯ 7 ಹಾಗೂ ಕುಂದಗೋಳ ತಾಲೂಕಿನ 3 ಕೆರೆಗಳನ್ನು ಭರ್ತಿ ಮಾಡಲಾಗುತ್ತಿದೆ. ಅದಕ್ಕಾಗಿ ಮಲಪ್ರಭಾ ಬಲದಂಡೆ ಕಾಲುವೆಯಿಂದ ಮಂಗಳವಾರ 600 ಕ್ಯುಸೆಕ್ಸ್ ನೀರು ಬಿಡುಗಡೆಯಾಗುತ್ತಿದೆ. ಈ ನೀರನ್ನು ಜನ, ಜಾನುವಾರುಗಳಿಗೆ ಕುಡಿಯುವ ಸಲುವಾಗಿಯೇ ಬಳಕೆ ಮಾಡಿಕೊಳ್ಳಬೇಕು ಅದರ ಹೊರತು ಇನ್ನ್ಯಾವುದೇ ಕೆಲಸಕ್ಕೂ ಬಳಕೆ ಮಾಡಬಾರದು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಈ ನೀರನ್ನು ಅನ್ಯ ಉದ್ದೇಶಗಳಿಗೆ ಉಪಯೋಗಿಸಬಾರದು ಎಂದು ಒಟ್ಟು 66 ಗ್ರಾಮಗಳಲ್ಲಿ 144 ಸೆಕ್ಷನ್ ಜಾರಿ ಮಾಡಿದ್ದಾರೆ.

ಇಂದಿನಿಂದ 10 ದಿನಗಳ ಕಾಲ ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ಹಾಗೂ ನರಗುಂದ ಶಾಖಾ ಕಾಲುವೆ ಮುಖಾಂತರ ಮಲಪ್ರಭಾ ನೀರು ಹರಿದು ಬರಲಿದೆ.

ಈ ನೀರನ್ನು ರೈತರು ಬೇರೆ ಕಾರಣಕ್ಕೆ ಬಳಕೆ ಮಾಡದಂತೆ ಬಂದೋಬಸ್ತ್ ಮಾಡಲಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿಯೇ 144 ಸೆಕ್ಷನ್ ಜಾರಿ ಮಾಡಿರುವುದಾಗಿ ಜಿಲ್ಲಾಧಿಕಾರಿ ದಿವ್ಯಪ್ರಭು ತಿಳಿಸಿದ್ದಾರೆ.

# ದೇವಸ್ಥಾನದ ನೂತನ ಗೋಪುರ ಹಾಗೂ ಕಳಸ ಪ್ರತಿಷ್ಠಾಪನೆ



ಶಿರಾ: ಶಿರಾ ಶ್ರೀನಿವಾಸ ನಗರ (ಕರೇಕಲ್ಲಹಟ್ಟಿ) ಬಡಾವಣೆಯಲ್ಲಿ ಮೇ. 16ರ ಗುರುವಾರ ಹಾಗೂ ಮೇ. 17ರ ಶುಕ್ರವಾರದಂದು ಶ್ರೀ ಕೊಲ್ಲಾಪುರದಮ್ಮ ದೇವಿ ದೇವಸ್ಥಾನದ ನೂತನ ಗೋಪುರ ಹಾಗೂ ಕಳಸ ಪ್ರತಿಷ್ಠಾಪನೆಯ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮತಿಯವರು ತಿಳಿಸಿದ್ದಾರೆ.

ಮೇ. 16 ರ ಗುರುವಾರ ಸಂಜೆ 6 ಗಂಟೆಗೆ ಗಂಗಾಪೂಜೆ, ಧ್ವಜಾರೋಹಣ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನೆರವೇರುವವು. ಮೇ. 17ರ ಶುಕ್ರವಾರ ಮುಂಜಾನೆ 5 ಗಂಟೆಯಲ್ಲಿ ಶ್ರೀ ಕೊಲ್ಲಾಪುರದಮ್ಮ ದೇವಿ ಗೋಪುರ ಕಳಶ ಪ್ರತಿಷ್ಠಾಪನೆ, ಕುಂಬಾಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನೆರವೇರುವವು. ಬೆಳಿಗ್ಗೆ 11 ಗಂಟೆಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಶ್ರೀ ಶಿಲ್ಪಿ ನೀಲಕಂಠಾಚಾರ್ ಮತ್ತು ಶ್ರೀ ಶಿಲ್ಪಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ವಿಶೇಷ ಆಹ್ವಾನಿತರಾಗಿ ಆಹಾರ ಮತ್ತು ನಾಗರೀಕ ಖಾತೆ ಸಚಿವ ಕೆ.ಹೆಚ್.ಮುನಿಯಪ್ಪ, ಶಾಸಕ ಟಿ.ಬಿ.ಜಯಚಂದ್ರ, ಸಿ.ಬಿ.ಸುರೇಶ್ ಬಾಬು, ವಿಧಾನಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ, ಮಾಜಿ ಶಾಸಕ ಡಾ.ಸಿ.ಎಂ. ರಾಜೇಶ್ ಗೌಡ ಸೇರಿದಂತೆ ಹಲವರು ಭಾಗವಹಿಸುವರು ಎಂದು ಆಯೋಜಕರು ತಿಳಿಸಿದ್ದಾರೆ.

# ಅಪಘಾತ : ಅಮ್ಮನ ಮಡಿಲಿನಲ್ಲಿ ಮಗಳು ಸಾವು

ಶಿವಮೊಗ್ಗ: ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಆಟೋದಲ್ಲಿದ್ದ ವಿದ್ಯಾರ್ಥಿನಿಯೊಬ್ಬರು ಸಾವನ್ನಪ್ಪಿರುವ ಘಟನೆ ಶಿವಮೊಗ್ಗದ ತಾವರೆ ಚಟ್ನಳ್ಳಿ ಬಳಿ ನಡೆದಿದೆ.

ಘಟನೆಯಲ್ಲಿ ಗಾನವಿ (17) ಎಂಬ ವಿದ್ಯಾರ್ಥಿನಿ ಮೃತಪಟ್ಟಿದ್ದು, ಆಕೆಯ ತಾಯಿ ಮತ್ತು ಅಜ್ಜಿ ಗಾಯಗೊಂಡಿದ್ದಾರೆ. ಚಟ್ನಳ್ಳಿಯ ಪೇಸ್ ಕಾಲೇಜಿನ ವಿದ್ಯಾರ್ಥಿನಿ ಗಾನವಿ ತಾವರೆ ಕಾಲೇಜು ಮುಂಭಾಗದಲ್ಲಿ ನಡೆದ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಗಾನವಿ ಮೂಲತಃ ಚಿತ್ರದುರ್ಗ ಜಿಲ್ಲೆಯ ಅಜ್ಜಂಪುರ ನಿವಾಸಿಯಾಗಿದ್ದು, ಗಾನವಿಗೆ ಇಂದು ರಜೆ ಇದ್ದ ಕಾರಣ ಆಕೆಯ ತಾಯಿ ಹಾಗೂ ಅಜ್ಜಿ ಸಂಬಂಧಿಕರ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಿದ್ದರು.

ಕಾರ್ಯಕ್ರಮ ಮುಗಿಸಿ ಕಾಲೇಜಿಗೆ ಮರಳುತ್ತಿದ್ದಾಗ ಗಾನವಿ ಅಪಘಾತದಲ್ಲಿ ಮೃತಪಟ್ಟಿದ್ದಾಳೆ. ಕಾಲೇಜಿಗೆ ಸೇರಬೇಕಿದ್ದ ಗಾನವಿ ಸಾವನ್ನಪ್ಪಿದ್ದಾಳೆ.

ವೇಗವಾಗಿ ಬಂದ ಕ್ಯಾಂಟರ್ ಆಟೋಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಆಟೋ ಎಡಕ್ಕೆ ಬಿದ್ದಿದೆ. ಆಟೋದ ಎಡಭಾಗದಲ್ಲಿದ್ದ ಗಾನವಿ ಮೊದಲು ನೆಲಕ್ಕೆ ಬಿದ್ದಿದ್ದಾಳೆ. ಇದರಿಂದ ಆಕೆಯ ಹೊಟ್ಟೆಗೆ ತೀವ್ರ ಪೆಟ್ಟಾಗಿದೆ.

ಇದರಿಂದ ಗಾನವಿ ಗಾಯಗೊಂಡು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿದ್ದಾಳೆ. ಆಕೆಯ ತಾಯಿ ಮತ್ತು ಅಜ್ಜಿ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚೀಲೂರಿನಲ್ಲಿ ಹಿಟ್ ಅಂಡ್ ರನ್ ಮಾಡಿದ ಕ್ಯಾಂಟರ್ ಚಾಲಕನನ್ನು ಪೋಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಅಪಘಾತದ ನಂತರ ನಿಲ್ಲಿಸದೆ ಓಡಿಹೋದ ಕ್ಯಾಂಟರ್ ಅನ್ನು ಸ್ಥಳೀಯರು ಹಿಂಬಾಲಿಸಿದಾಗ, ಕ್ಯಾಂಟರ್ ಚಾಲಕ ಅವರ ಕಾರಿಗೆ ಡಿಕ್ಕಿ ಹೊಡೆಯಲು ಪ್ರಯತ್ನಿಸಿದರು.

ಈ ಕುರಿತು ಶಿವಮೊಗ್ಗದ ಪೂರ್ವ ಸಂಚಾರಿ ಪೋಲಿಸ್ ಠಾಣೆಯಲ್ಲಿ ದಾಖಲಾಗಿದೆ.

# ಗುರಿಯೆಡೆಗೆ ಗಮನವಿರಲಿ ಅಡೆತಡೆಗಳ ಮೇಲಲ್ಲ : ಶ್ರೀ ರಂಭಾಪುರಿ

ಚನ್ನರಾಯಪಟ್ಟಣ: ಮನುಷ್ಯ ಜೀವನದಲ್ಲಿ ಸಾಧನೆ ಮಾತನಾಡಬೇಕೆ ವಿನಾ ಮಾತನಾಡುವುದೆ ಸಾಧನೆಯಾಗಬಾರದು. ಗುರಿಯೆಡೆಗೆ ನಮ್ಮೆಲ್ಲರ ಗಮನ ಇರಬೇಕೆ ಹೊರತು ಮಧ್ಯೆ ಬರುವ ಅಡೆತಡೆಗಳ ಮೇಲಲ್ಲ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇತ್ತೀಚೆಗೆ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ನಾಗರನವಿಲೆ ಶ್ರೀ ನಾಗೇಶ್ವರಸ್ವಾಮಿಗೆ ಕ್ಷೀರಾಭಿಷೇಕ ನೆರವೇರಿಸಿದ ನಂತರ ಜರುಗಿದ ಧರ್ಮ ಸಮಾರಂಭದಲ್ಲಿ ಆಶೀರ್ವಚನ ನೀಡುತ್ತಿದ್ದರು.

ಜೀವನ ಉಜ್ವಲ ಭವಿಷ್ಯಕ್ಕೆ ಧರ್ಮ ಪ್ರಜ್ಞೆ ಮತ್ತು ಧರ್ಮಾಚರಣೆ ಬಹಳ ಮುಖ್ಯ. ದೇವರು ಧರ್ಮದಲ್ಲಿ ನಮ್ಮ ನಂಬಿಕೆ ಅಚಲವಾಗಿರಬೇಕು. ದೇಹವನ್ನು ದುಡಿಮೆಗೆ ಮನಸ್ಸನ್ನು ಭಗವಂತನಿಗೆ ಅರ್ಪಿಸಿ ಮುನ್ನಡೆದಾಗ ಜೀವನ ಉಜ್ವಲಗೊಳ್ಳುತ್ತದೆ ಮನುಷ್ಯನಲ್ಲಿ ವೈಚಾರಿಕ ಭಾವನೆಗಳು ಬೆಳೆದು ಬರಲಿ. ಆದರೆ ಧರ್ಮ ದೇವರಲ್ಲಿ ನಾಸ್ತಿಕ ಮನೋಭಾವ ಬೆಳೆಯಬಾರದು.

ಶ್ರೀ ನಾಗೇಶ್ವರಸ್ವಾಮಿ ಕ್ಷೇತ್ರ ಜಾಗೃತ ಸ್ಥಳ. ಭಕ್ತರ ಅನಿಷ್ಟಗಳನ್ನು ದೂರ ಮಾಡಿ ಇಷ್ಟಾರ್ಥ ಫಲಗಳನ್ನು ಕೊಡುವ ಪವಿತ್ರ ತಾಣ. ನಾಡಿನ ಜನರಿಗೆ ಒಳ್ಳೆಯದಾಗಬೇಕು. ನಾಡಿನೆಲ್ಲೆಡೆ ವರುಣ ದೇವ ಕೃಪೆ ತೋರಿ ಬಂಜರ ಭೂಮಿ ತಂಪಾಗಿ



ರೈತರ ಬಾಳು ಉಜ್ವಲವಾಗಬೇಕೆಂದು ಸಂಕಲ್ಪಿಸಿ ಶ್ರೀ ನಾಗೇಶ್ವರಸ್ವಾಮಿಗೆ ಕ್ಷೀರಾಭಿಷೇಕ ಪೂಜೆ ಸಲ್ಲಿಸಿದ್ದೇವೆ ಎಂದರು.

ನವಿಲೆ ಗ್ರಾಮದ ಸಿದ್ಧೇಶ್ವರ ಶಾಸ್ತ್ರಿಗಳು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಯುವ ಸಾಹಿತಿ ಡಾ.ಗುರುಪಾದಯ್ಯ ಸಾಲಿಮಠ ಇವರಿಗೆ ಗುರುರಕ್ಷೆ ನೀಡಿ ಆಶೀರ್ವದಿಸಿದರು.

ಮಾಜಿ ಶಾಸಕ ಹಾಗೂ ಹಾಸನ ಜಿಲ್ಲೆ ವೀರಶೈವ ಸಮಾಜದ ಅಧ್ಯಕ್ಷೆ ಗುರುದೇವ, ಹಾಸನ ತಾಲೂಕ ವೀರಶೈವ ಸಮಾಜದ ಕಟ್ಟಾಯ ಶಿವಕುಮಾರ್, ನವಿಲೆ ಮಂಜುನಾಥ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಪವನಕುಮಾರ್ ನಿರೂಪಿಸಿದರು.

# ಶಂಕರಾಚಾರ್ಯರ ತತ್ವ ಪಾಲನೆ ಮಾಡಿ: ಅಶ್ವಿನಿಕುಮಾರ್

ಸಾಗರ : ಶಂಕರರ ತತ್ವಗಳನ್ನು ಮನೆಮನೆಗೆ ತಲುಪಿಸುವ ಕೆಲಸವನ್ನು ಶಂಕರಮಠ ಮಾಡುತ್ತಿದೆ. ಶಂಕರಾಚಾರ್ಯರ ತತ್ವಗಳನ್ನು ಪಾಲನೆ ಮಾಡುವುದರಿಂದ ಆಧ್ಯಾತ್ಮಿಕವಾಗಿ ನಮ್ಮನ್ನು ನಾವು ಗಟ್ಟಿಗೊಳಿಸಿಕೊಳ್ಳಲು ಸಾಧ್ಯವಿದೆ ಎಂದು ಶೃಂಗೇರಿ ಶಂಕರಮಠದ ಧರ್ಮದರ್ಶಿ ಅಶ್ವಿನಿ ಕುಮಾರ್ ತಿಳಿಸಿದರು.

ಇಲ್ಲಿನ ಭಾರತೀತೀರ್ಥ ಸಭಾಭವನದಲ್ಲಿ ಸೋಮವಾರ ಶಂಕರ ಜಯಂತಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ನವಗ್ರಹ ಪೂರ್ವಕ ರುದ್ರ ಹವನ ಸಮಾರೋಪ ಸಮಾರಂಭದ ಧಾರ್ಮಿಕ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಶಂಕರಚಾರ್ಯರ ಹೆಸರೆ ಒಂದು ವಿಶೇಷವಾದ ಶಕ್ತಿಯನ್ನು ತಂದು ಕೊಡುತ್ತದೆ. ಶಂಕರ ಜಯಂತಿ ಸಂದರ್ಭದಲ್ಲಿ ಶಾಂಕರ ತತ್ವಗಳನ್ನು ಪಠಣ ಮಾಡುವುದರಿಂದ, ಶ್ರವಣ ಮಾಡುವುದರಿಂದ ಪುಣ್ಯ ಲಭಿಸುತ್ತದೆ. ಸನಾತನ ಧರ್ಮ ಸಂರಕ್ಷಣೆಗಾಗಿ ಶಂಕರಾಚಾರ್ಯರು ಮಾಡಿರುವ ಕೆಲಸ ಸ್ಮರಣೀಯವಾದದ್ದು ಎಂದರು.

ಶೃಂಗೇರಿ ಶಂಕರಮಠ ಪ್ರಾರಂಭವಾಗಿ 25 ವರ್ಷವಾಯಿತು. ಇದು 25ನೇ ಶಂಕರ ಜಯಂತಿಯಾಗಿರುವುದರಿಂದ ಅನೇಕ ಧಾರ್ಮಿಕ ಕಾರ್ಯಕ್ರಮವನ್ನು ಮಠದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಶೃಂಗೇರಿ ಶ್ರೀಗಳ ಮಾರ್ಗದರ್ಶನದಲ್ಲಿ ಮಠದ ಪರಿಪೂರ್ಣ ಅಭಿವೃದ್ದಿಗೆ ಅಗತ್ಯ ಸಿದ್ದತೆ ನಡೆಸಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸದಾಶಿವ ಜೋಯ್ಸ್, ಮಾ.ಸ.ನಂಜುಂಡಸ್ವಾಮಿ, ಪ್ರೊ. ಕೆ.ಆರ್.ಕೃಷ್ಣಯ್ಯ, ಮಹಾಬಲೇಶ್ವರ ಭಟ್, ಕೆ.ಜಿ.ಸುರೇಶ್, ಗೊರಮನೆ ಪ್ರಕಾಶ್ ಇನ್ನಿತರರು ಹಾಜರಿದ್ದರು.

# ಯರಗುದ್ರಿ ಬರಪಿಡಿತ ಪ್ರದೇಶವೆಂದು ಘೋಷಿಸಬೇಕೆಂದು ಆಗ್ರಹಿಸಿ ಮನವಿ



ಮೂಡಲಗಿ: ತಾಲೂಕಿನ ಹೊಸಯರಗುದ್ರಿ ಗ್ರಾಮದ ರೈತರು ಹೊಸಯರಗುದ್ರಿ ಬರಪಿಡಿತ ಪ್ರದೇಶ ಎಂದು ಘೋಷಿಸಬೇಎಂದು ಆಗ್ರಹಿಸಿ ಮೂಡಲಗಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಸನ್ 2023-24 ನೇ ಸಾಲಿನಲ್ಲಿ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮತ್ತು ತಾಲೂಕುಗಳಲ್ಲಿ ಮಳೆಯಾಗದೇ ಕುಡಿಯುವ ನೀರಿಗೂ ಪರದಾಡುವಂತಹ ಪರಸ್ಥಿತಿ ಬಂದಿದ್ದು ಕಾರಣ ಸರ್ಕಾರದಿಂದ ಎಲ್ಲಾ ಬರಪಿಡಿತ ಪ್ರದೇಶಗಳಿಗೆ ಬರಪರಿಹಾರ ಹಣವನ್ನು ರೈತರ ಖಾತೆಗಳಿಗೆ ನೀಡಿದ್ದು ಇರುತ್ತದೆ.

ಆದರೆ ಮೂಡಲಗಿ ತಾಲೂಕಿನ ತುಂಬ ಬರಗಾಲ ಇದ್ದರೂ ಕೂಡ ಕೇವಲ 13 ಹಳ್ಳಿಗಳನ್ನು ಬರಪಿಡಿತ ಪ್ರದೇಶ ಎಂದು ಗುರುತಿಸಲಾಗಿರುತ್ತದೆ.

ಅದರಂತೆ ಹೊಸ ಯರಗುದ್ರಿ ಗ್ರಾಮದಲ್ಲಿಯೂ ಕೂಡ ಈ ವರ್ಷ ಬರಗಾಲವಿದ್ದರೂ ನಮ್ಮ ಗ್ರಾಮವನ್ನು ಬರಪಿಡಿತ ಪ್ರದೇಶ ಎಂದು ಗುರುತಿಸಿಲ್ಲ. ನಮ್ಮ ಗ್ರಾಮವನ್ನು ನಿಜವಾಗಿಯೂ ಬರಪಿಡಿತ ಪ್ರದೇಶ ಇದೇಯೋ ಅಥವಾ ಇಲ್ಲವೋ ಎಂದು ಖಚಿತ ಪಡಿಸಿಕೊಂಡು ನಮ್ಮ ಗ್ರಾಮವನ್ನು ಬರಪೀಡಿತ ಪ್ರದೇಶ ಅಂತಾ ಘೋಷಿಸಿ ಮತ್ತು ಬರಗಾಲದಿಂದ ಬೆಳೆ ನಷ್ಟವಾದ ರೈತರಿಗೆ ನ್ಯಾಯ ಒದಗಿಸಿ ಬರಪರಿಹಾರ ಹಣವನ್ನು ನೀಡಬೇಕೆಂದು ಮನವಿಸಲ್ಲಿಸಿದರು.

ರೈತರಿದಿಂದ ಮನವಿ ಸ್ವೀಕಿಸಿದ ಶಿರಸ್ಥೆದಾರ ಪರುಶುರಾಮ ನಾಯಿಕ ಅವರು ಮೇಲಾಧೀಕಾರಿಗಳ ಗಮನಕ್ಕೆ ತರುವುದಾಗಿ ಬವಸೆ ನೀಡಿದರು.

ಈ ಸಮಯದಲ್ಲಿ ಹೊಸಯರಗುದ್ರಿ ಗ್ರಾಮದ ರೈತರಾದ ವೆಂಕಪ್ಪ ನಾಯಿಕ, ನಿಂಗಪ್ಪ ಮಜ್ಜಗಿ, ಸುರೇಶ ನಾಯಕ, ಶಿವನಗೌಡ ಪಾಟೀಲ, ಬಸಪ್ಪ ಪಾಟೀಲ, ಅಡಿವೆಪ್ಪ ಮಿರ್ಜಿ, ತಿಮ್ಮನ ಮಜ್ಜಗಿ, ಪ್ರಮೋದ ಚನ್ನಾಳ, ಸುರೇಶ ಗೊಮ್ಮಡಿ, ಸಚೀನ ಮಾಳೇದ, ಸತ್ತೆಪ್ಪ ಹೂಗಾರ, ಕಷ್ಟಪ್ಪ ಪೂಜೇರಿ, ಭೀಮಪ್ಪ ಮಂಟನವರ, ಬಸನಗೌಎ ಗುದ್ದಿ, ಕಲ್ಲಪ್ಪ ಗುದ್ದಿ, ವೆಂಕಪ್ಪ ಮಜ್ಜಗಿ, ಸಿದ್ದಪ್ಪ ಮುರಕಟನಾಳ, ಶಂಕ್ರಪ್ಪ ಮಜ್ಜಗಿ, ಪದ್ಮನಾಭ ನ್ಯಾಮಗೌಡ ಮತ್ತಿತರರು ಇದ್ದರು.

# ಕೇರ್ ಏಷ್ಯಾ ಆಸ್ಪತ್ರೆ ಸಿಬ್ಬಂದಿ ವಿರುದ್ಧ ದೂರು!

ನೆಲಮಂಗಲ: ಬೈಕ್ ಅಪಘಾತದಲ್ಲಿ ಗಾಯವಾಗಿದ್ದ ವ್ಯಕ್ತಿಯನ್ನು 108 ಅಂಬುಲೆನ್ಸ್ ನಲ್ಲಿ ನಗರದ ಕೇರ್ ಏಷ್ಯಾ ಆಸ್ಪತ್ರೆಗೆ ಸೇರಿಸಿದ್ದು. ಇದನ್ನು ಕೇಳಿದ್ದಕ್ಕೆ ಆಸ್ಪತ್ರೆ ಸಿಬ್ಬಂದಿ ರೌಡಿಗಳಂತೆ ವರ್ತಿಸಿ ಬೆದರಿಕೆಯಾಗಿದ್ದಾರೆ ಎಂದು ನೆಲಮಂಗಲ ಟೌನ್ ಠಾಣೆಯಲ್ಲಿ ದಲಿತ ಮುಖಂಡ ಮಲ್ಲೇಶ್ ಎಂಬುವರು ದೂರು ದಾಖಲಿಸಿದ್ದಾರೆ.

ತಾಲೂಕಿನಲ್ಲಿ ಯಾವ ಭಾಗದಲ್ಲಿ ಅಪಘಾತ ಪ್ರಕರಣಗಳ ನಡೆದರು 108 ಅಂಬುಲೆನ್ಸ್ ಗಳು ನೇರವಾಗಿ ಸರ್ಕಾರಿ ಆಸ್ಪತ್ರೆಗೆ ಬರದೆ ಖಾಸಗಿ ಆಸ್ಪತ್ರೆಗಳಿಗೆ ರೋಗಗಳನ್ನು ಕರೆದುಕೊಂಡು ಹೋಗುತ್ತಿವೆ ಎಂಬುದರ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದರು ಅಧಿಕಾರಿಗಳು ನಿರ್ಲಕ್ಷ ಮಾಡಿದ ಪರಿಣಾಮ. ಖಾಸಗಿ ಆಸ್ಪತ್ರೆಗಳ ಸಿಬ್ಬಂದಿಗಳು ರೋಗಿಗಳ ಸಂಬಂಧಿಕರ ಮೇಲೆ ರೌಡಿಗಳಂತೆ ವರ್ತಿಸಿದರು ಎಂದು ದೂರುದಾರರು ಆರೋಪಿಸಿದ್ದಾರೆ.

ರಸ್ತೆ ಅಪಘಾತದಲ್ಲಿ ಗಾಯವಾಗಿದ್ದ ನವೀನ್ ಕುಮಾರ್ ನನ್ನು 108 ಆಂಬುಲೆನ್ಸ್ ನಲ್ಲಿ ನಗರಕ್ಕೆ ಕರೆತಂದು ಸರ್ಕಾರಿ ಆಸ್ಪತ್ರೆಗೆ ಹೋಗದೆ ನೇರವಾಗಿ ಖಾಸಗಿ ಆಸ್ಪತ್ರೆಯಾದ ಕೇರ್ ಏಷ್ಯಾ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ, ತಕ್ಷಣ ಸಂಬಂಧಿಕರು ಬಂದು ಕೇಳಿದಾಗ 20 ಸಾವಿರ ಬಿಲ್ ಕಟ್ಟುವಂತೆ ಕೇಳಿದ್ದಾರೆ.108 ಆಂಬುಲೆನ್ಸ್ ಇಲ್ಲಿಗೆ ಏಕೆ ಬಂತು.

ಸಣ್ಣಪುಟ್ಟ ಗಾಯಗಳಾಗಿದ್ದರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತೇವೆ. ನಮ್ಮ ಬಳಿ ಅಷ್ಟು ಹಣವಿಲ್ಲ ಎಂದು ಹೇಳಿದಾಗ ಆಸ್ಪತ್ರೆ ಸಿಬ್ಬಂದಿ ಸಿದ್ದೇಶ್ ಹಾಗೂ

ಕೆಲಬೌನ್ಸರ್ ಗಳು ರೌಡಿಗಳಂತೆ ವರ್ತಿಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ದಲಿತ ಮುಖಂಡ ಮಲ್ಲೇಶ್ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# 'ಗಂಗೆಯನ್ನು ಭೂಮಿಗೆ ತಂದ ಭಗೀರಥರು ಮಹಾನ್ ಋಷಿ'

ರಾಮನಗರ: ಭಗೀರಥರ ಪೂರ್ವಜರಿಗೆ ಶಾಪವಿಮೋಚನೆ ಮಾಡಲು ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ತಂದವರು ಭಗೀರಥ ಋಷಿಗಳು ಎಂದು ಉಪ್ಪಾರ ಸಮುದಾಯದ ಮುಖಂಡರಾದ ವೆಂಕಟೇಶ್ ಮೂರ್ತಿ ಅವರು ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಗೀರಥರು ಸೂರ್ಯವಂಶಕ್ಕೆ ಸೇರಿದವರು ಮತ್ತು ರಾಮನ ಪೂರ್ವಜರಾಗಿದ್ದು ಅವರ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಭಗೀರಥರ 60 ಸಾವಿರ ಚಿಕ್ಕಪ್ಪಂದಿರು ಶಾಪದಿಂದ ಬಿಡುಗಡೆ ಮಾಡಲು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದರು.

ಗಂಗೆಯು ನೇರವಾಗಿ ಭೂಮಿಗೆ ಇಳಿದರೆ ತನ್ನ ಬಲವು ಭೂಮಿಯನ್ನು ನಾಶಪಡಿಸುತ್ತದೆ ಎಂದು ಗಂಗಾ ಭಗೀರಥನಿಗೆ ಹೇಳಿದಳು ನಂತರ ಭಗೀರಥನು ಶಿವನನ್ನು ಕುರಿತು ತೀವ್ರ ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ಇಳಿಸುವಂತೆ ಕೇಳಿದನು. ಶಿವನು ಅವನಿಗೆ ವರವನ್ನು ನೀಡಿದನು. ಗಂಗಾ ದೇವಿಯು ಗಂಗಾ ನದಿಯ ರೂಪದಲ್ಲಿ ಭೂಮಿಗೆ ಇಳಿಯಲು ಕಾರಣವಾಯಿತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಮೇಶ್ ಬಾಬು, ಉಪ್ಪಾರ ಸಮುದಾಯದ ಮುಖಂಡರಾದ ಕೆ. ಟಿ. ಆಂಜನಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ವಸತಿ ನಿಲಯ ಪ್ರವೇಶ

ಬಾಗೇಪಲ್ಲಿ: ತಾಲೂಕು ಬಲಿಜ ಸೇವಾ ಚಾರಿಟಬಲ್ ಟ್ರಸ್ಟತಿಯಿಂದ ಬಲಿಜ ಜನಾಂಗದ ವಿದ್ಯಾರ್ಥಿಗಳಿಗೆ ಪ್ರಥಮ ಬಾರಿಗೆ ವಸತಿ ನಿಲಯದ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು ಆರ್ಹ ವಿದ್ಯಾರ್ಥಿಗಳು ಪ್ರವೇಶ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಬಲಿಜ ಸಂಘದ ರಾಜ್ಯ ನಿರ್ದೇಶಕ ಕೆ.ನರಸಿಂಹಪ್ಪ ತಿಳಿಸಿದ್ದಾರೆ. ಬಾಗೇಪಲ್ಲಿ ಪಟ್ಟಣದ 16ನೇ ವಾರ್ಡ್‌ನ ಓಂ ಶಕ್ತಿ ದೇವಾಲಯದ ಬಳಿ ನಿರ್ಮಿಸಿರುವ ನೂತನ ಬಲಿಜ ವಿದ್ಯಾರ್ಥಿ ನಿಲಯದಲ್ಲಿ 50 ಜನ ವಿದ್ಯಾರ್ಥಿಗಳಿಗೆ ಎಲ್ಲಾ ಮೂಲ ಭೂತ ಸೌಲಭ್ಯಗಳೊಂದಿಗೆ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದ್ದು, ಎಸ್‌ಎಸ್‌ಎಲ್‌ಸಿ ಯಿಂದ ಉನ್ನತ ವ್ಯಾಸಂಗ ಮಾಡುವವರಿಗೆ ವಸತಿ ನಿಲಯದ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸ್ಥಳೀಯ

ಇ-ಪೇಪರ್: www.munjaneevartheepaper.com

# ಹೊಸ ಎಲೆಕ್ಟ್ರಿಕ್ ಬೈಕ್ ಬಿಡುಗಡೆ

ಬೆಂಗಳೂರು: ವಿದ್ಯುಚ್ಛಾಲಿತ ಇವಿ ಉದ್ಯಮದ ಟಾಪ್ 10 ಸಂಸ್ಥೆಗಳಲ್ಲಿ ಒಂದಾದ ಎಲೆಕ್ಟ್ರಿಕ್ಸ್ ಇವಿಯು ವಿದ್ಯುಚ್ಛಾಲಿತ ಮೊಬಿಲಿಟಿಯಲ್ಲಿ ದೂರದೃಷ್ಟಿಯ ಸಂಸ್ಥೆ ಫ್ಯೂಚರ್ ಎಲೆಕ್ಟ್ರಾ ಜೊತೆಯಲ್ಲಿ ಕಾರ್ಯತಂತ್ರೀಯ ಸಹಯೋಗ ಹೊಂದಿದೆ. ಈ ಸಹಯೋಗವು ಭಾರತದಲ್ಲಿ ಮೊಬಿಲಿಟಿಗೆ ಸುಸ್ಥಿರ ಮತ್ತು ಲಭ್ಯವಿರುವ ಭವಿಷ್ಯದತ್ತ ಮಹತ್ತರ ಮೈಲಿಗಲ್ಲಾಗಿದೆ.

ಫ್ಯೂಚರ್ ಎಲೆಕ್ಟ್ರಾ ಭಾರತದಲ್ಲಿ ವಿದ್ಯುಚ್ಛಾಲಿತ ಮೊಬಿಲಿಟಿಯನ್ನು ಎಲ್ಲರನ್ನೂ ಒಳಗೊಳ್ಳುವ ಮತ್ತು ಎಲ್ಲ ವ್ಯಕ್ತಿಗಳು ಹಾಗೂ ಉದ್ಯಮಗಳಿಗೆ ಉನ್ನತಗೊಳಿಸುವ ಮೂಲಕ ವಿದ್ಯುತ್ ಸಾರಿಗೆಯ ಪರಿವರ್ತನೆಗೆ ವೇಗ ತುಂಬಲಿದ್ದು ಹಸಿರು ಮತ್ತು ಹೆಚ್ಚು ದಕ್ಷತೆಯ ನಾಳೆಗೆ ಕೊಡುಗೆ ನೀಡಲಿದೆ.

ಈ ಸಹಯೋಗದ ಭಾಗವಾಗಿ ಅತ್ಯಾಧುನಿಕ ದ್ವಿಚಕ್ರ ವಾಹನಗಳಿಗೆ ಖ್ಯಾತಿ ಪಡೆದ ಎಸ್.ಎ.ಆರ್. ಸಮೂಹದ




ವಿದ್ಯುಚ್ಛಾಲಿತ ಮೊಬಿಲಿಟಿ ಅಂಗವಾದ ಲೆಕ್ಟ್ರಿಕ್ಸ್ ಇವಿ ಒಂದು ವರ್ಷದ ಅವಧಿಯಲ್ಲಿ 2500 ಅತ್ಯಾಧುನಿಕ ವಿದ್ಯುಚ್ಛಾಲಿತ ದ್ವಿಚಕ್ರ ವಾಹನಗಳನ್ನು ಫ್ಯೂಚರ್ ಎಲೆಕ್ಟ್ರಾಗೆ ಪೂರೈಸಲಿದೆ. ಈ ವಾಹನಗಳು ವಿದ್ಯುಚ್ಛಾಲಿತ ಮೊಬಿಲಿಟಿ ಪರಿಹಾರಗಳನ್ನು ವಿಸ್ತರಿಸುವ ಮತ್ತು ವ್ಯಕ್ತಿಗಳು ಹಾಗೂ ಉದ್ಯಮಗಳಿಗೆ ಸುಸ್ಥಿರ ಆಯ್ಕೆಗಳ ಮೂಲಕ ಸಬಲೀಕರಿಸುವ ಫ್ಯೂಚರ್ ಎಲೆಕ್ಟ್ರಾ ಧ್ಯೇಯೋದ್ದೇಶದಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

# ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ.ನಿಂದ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ

ಬೆಳಗಾವಿ: ಭಾರತದ ಮೊದಲ ಸಹಕಾರ ತತ್ವದ ಆಸ್ಪತ್ರೆ 1951ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಪ್ರಾರಂಭವಾದ ಶ್ರೀ ಜಗದ್ಗುರು ಗುರುಸಿದ್ದ ರಾಜಯೋಗೀಂದ್ರ ಕೋ-ಆಪರೇಟಿವ್ ಹಾಸ್ಪಿಟಲ್ ಅಂಡ್ ರೀಸರ್ಚ್ ಇನ್ಸ್ಟಿಟ್ಯೂಟ್(ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ) ಹೊಸ 250 ಹಾಸಿಗೆಗಳ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣದ ಮೂಲಕ ತನ್ನ ಸೇವೆಗಳಲ್ಲಿ ಗಮನಾರ್ಹ ವಿಸ್ತರಣೆಯನ್ನು ಯೋಜಿಸಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಯು ಪ್ರಸ್ತುತ 10-ಹಾಸಿಗೆಯ ಸಾಂಪ್ರದಾಯಿಕ ಭಾರತೀಯ ವೈದ್ಯ ಪದ್ಧತಿಯಾದ ಯುನಾನಿ ವೈದ್ಯಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿರುವ ಈ ಸಂಸ್ಥೆಗೆ ಪ್ರಮುಖ ಹೆಜ್ಜೆಯಾಗಿದೆ. ಕಳೆದ 70 ವರ್ಷಗಳಿಂದ ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ ತನ್ನ ಅತ್ಯಂತ ಸಣ್ಣದಾದ ಪ್ರಾರಂಭದಿಂದ



ವೈದ್ಯಕೀಯ ಆರೈಕೆ, ಶಿಕ್ಷಣ ಮತ್ತು ಸಂಶೋಧನೆಗೆ ಗೌರವಾನ್ವಿತ ಕೇಂದ್ರವಾಗಿ ಬೆಳೆದಿದೆ. ಇದು ವೈದ್ಯಕೀಯ ಮತ್ತು ನರ್ಸಿಂಗ್ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಪ್ರಸ್ತಾವಿತ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಯು ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ.ಗೆ ವಿಸ್ತಾರ ಶ್ರೇಣಿಯ ವೈದ್ಯಕೀಯ ಸೇವೆಗಳನ್ನು ಒದಗಿಸಲು ಅವಕಾಶ ಕಲ್ಪಿಸುತ್ತದೆ. ಇದು ಸೀಮಿತ ಆರೋಗ್ಯಸೇವಾ ಸೌಲಭ್ಯಗಳನ್ನು ಹೊಂದಿರುವ ಘಟಪ್ರಭಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಬಹಳ ಅನುಕೂಲ ಒದಗಿಸಲಿದೆ.

ಎಸ್.ಜೆ.ಜಿ.ಆರ್.ಸಿ.ಎಚ್.ಆರ್.ಐ ಸಂಸ್ಥೆಯ ಯಶಸ್ಸಿಗೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಶ್ರೀ ರಾಜಯೋಗೀಂದ್ರ ಮಹಾಸ್ವಾಮೀಜಿ ಅವರ ಆಶೀರ್ವಾದವೇ ಕಾರಣವಾಗಿದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
17 FRIDAY MAY 2024
17 ಶುಕ್ರವಾರ ಮೇ 2024

# ಪಕ್ಷದ ಪರವಾಗಿ ಕೆಲಸ ಮಾಡಿದರೆ ಮಾತ್ರ ನಮ್ಮ ಅಭ್ಯರ್ಥಿ ಗೆಲ್ಲಲು ಸಾಧ್ಯ ಬೇಳೂರು ಗೋಪಾಲಕೃಷ್ಣ.

ಪಕ್ಷದ ಪರವಾಗಿ ಎಲ್ಲರೂ ಕೆಲಸ ಮಾಡೋಣ. ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಎಲ್ಲರಿಗೂ ಸ್ನೇಹಿತರಿದ್ದಾರೆ. ನಾವೆಲ್ಲರೂ ಒಂದಾಗಿ ಸರಕಾರದ ಸಾಧನೆಯಾನ್ನು ಪ್ರತಿ ಮನೆಗೂ ತಲುಪಿಸುವ ಮಾತನಾಡಿ, ಪಕ್ಷಕ್ಕೆ ಆಶೀರ್ವದಿಸುವ ಕಾರ್ಯ ಮಾಡೋಣ.

ನೀತಿ ಸಂಹಿತೆ ಇರುವುದರಿಂದ ಅಭಿವೃದ್ಧಿ ಕೆಲಸ ಮಾಡುವುದು ಅಸಾಧ್ಯ. ಆದರೂ ಸರಕಾರ ಎಷ್ಟೇ ಅಭಿವೃದ್ಧಿ ಕೆಲಸ ಮಾಡಿದರು ಸರಕಾರ ಬೀಳಿಸುವ ಮಾತನಾಡಿ ಗೊಂದಲ ಸೃಷ್ಟಿಸುವ ಕಾರ್ಯದಲ್ಲಿ ವಿರೋಧಿಗಳು ತೊಡಗಿಕೊಂಡಿದ್ದಾರೆ. ಯಾರೇ ತಪ್ಪು ಮಾಡಿದರೂ ಶಿಕ್ಷೆ ಆಗಬೇಕು.



ಪ್ರಜ್ವಲ್ ಪ್ರಕರಣದಲ್ಲಿ ವಿರೋಧಿಗಳು ಸಿಬಿಐ ಗೆ ಒಪ್ಪಿಸುವಂತೆ ಆಗ್ರಹಿಸುತ್ತಿದ್ದಾರೆ. ಹಾಲಪ್ಪ ಪ್ರಕರಣದಲ್ಲಿ ಬಿಜೆಪಿ ಏನು ಮಾಡಿದೆ ಅನ್ನೋದು ಎಲ್ಲರಿಗೂ ಗೊತ್ತಿರುವ ವಿಚಾರ . ಮೋದಿಯವರ ಹಿಂದುತ್ವವು ಬದಲಾಗುತ್ತಿದೆ. ಅವರಿಗೂ ಸೋಲಿನ ಪೆಟ್ಟಿನ ರುಚಿ ನೋಡಿದ್ದಾರೆ. ಯುವಕರಿಗೆ ಕೆಲಸ ಕೊಡಿಸುವ ಭರವಸೆ ಸುಳ್ಳಾಗಿದೆ. ಮುಸಲ್ಮಾನರಿಗೆ ಸಮಾನತೆ ಕೊಟ್ಟಿದ್ದೇನೆ ಎನ್ನುವ ಮಾತನಾಡುತ್ತಿದ್ದಾರೆ.

ಈಗಲಾದರೂ ಅವರಿಗೆ ನಮ್ಮ ಕಾಂಗ್ರೆಸ್ ನ ಸಮಾನತೆಯ ಅರ್ಥ ಆಗುತ್ತಿದೆ. ಹೀಗಾಗಿಯೇ ಎಲ್ಲರೂ ಒಂದೇ ಎನ್ನುತ್ತಿದ್ದಾರೆ.

ಇಂದಿನಿಂದ ಪಕ್ಷ ಸಂಘಟನೆ ಕಾರ್ಯದಲ್ಲಿ ಎಲ್ಲರೂ ಸಕ್ರಿಯ ವಾಗಬೇಕು. ಎಲ್ಲಾ ವಿಭಾಗದ ವರೂ ಎಲ್ಲ ವಿಂಗ್ ನವರಿಗು ಕಚೇರಿ ಕೊಟ್ಟು ಕಾರ್ಯ ವೈಖರಿ ಗಮನಿಸುತ್ತೇನೆ. ವರ್ಷಕ್ಕೊಮ್ಮೆ ಸಭೆ ನಡೆಸಿ ಅವರ ಸಾಧನೆ ಗಮನಿಸುತ್ತೇನೆ.

ಕಾರ್ಯಕರ್ತರು ಜನರ ಪರವಾಗಿ ಕೆಲಸ ಮಾಡಿದಾಗ ಮಾತ್ರ ನಮ್ಮೊಳಗಿನ ನಾಯಕತ್ವ ಹೊರಬರಲು ಸಾಧ್ಯ. ಎಲ್ಲರೂ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಪಕ್ಷ ಗಟ್ಟಿಯಾಗಲು ಸಾಧ್ಯ.

ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಜಯಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಲಸೆ ಚಂದ್ರಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಉಷಾ, ಗಣಪತಿ ಮಂಡಗಳಲೇ, ಮಧು ಮಾಲತಿ, ಅಶೋಕ್ ಬೇಳೂರು, ಹೊಳೆಯಪ್ಪ, ವೀರೇಶ್ ಗೌಡರು, ಮಕ್ಬೂಲ್ ಅಹಮದ್, ರವಿ ಗೌಡ, ಕನ್ನಪ್ಪ, ದಿನೇಶ್, ಸುರೇಶ್ ಬಾಬು

ವರದಿ.ರಾಘವೇಂದ್ರ ತಾಳಗುಪ್ಪ



# ಸೂಡೂರು ಗೇಟ್ ಬಳಿ ರಸ್ತೆಗೆ ಉರುಳಿಬಿದ್ದ ಮರ – ವಾಹನ ಸಂಚಾರ ಅಸ್ತವ್ಯಸ್ತ

ಶಿವಮೊಗ್ಗ – ರಿಪ್ಪನ್‌ಪೇಟೆ ಮಾರ್ಗ ಬಂದ್.!

ಹೊಸನಗರ :– ತಾಲೂಕಿನದ್ಯಾನಂತ ಸುರಿದ ಮಳೆಗೆ ಮಲೆನಾಡ ಜನ ತತ್ತರ. ಮೂರು ದಿನಗಳಿಂದ ಸುರಿಯುತ್ತಿರುವ ಮಳೆ. ರೈತರ ಮೊಗದಲ್ಲಿ ಮಂದಹಾಸ. ರಿಪ್ಪನ್ ಪೇಟೆ ಸಮೀಪದ ಸೂಡುರು ಗೇಟ್ ಬಳಿ ರಸ್ತೆಗೆ ಮರ ಬಿದ್ದಿದ್ದು. ವಾಹನ ಸಂಚಾರ ಅಸ್ತ ವ್ಯಸ್ತ. ಶಿವಮೊಗ್ಗ ಹೊಸನಗರ ಸಂಚಾರ ಬಂದ್..

ವರದಿ. ತನುಜ್ ಕುಮಾರ್ ಹೊಸನಗರ

# ಮದ್ದೂರು ಮೆಡಿಕಲ್ ಆಸ್ಪತ್ರೆಯಲ್ಲಿ ರೋಗಿ ಸಾವು 8 ಲಕ್ಷ ದಂಡ

ಪಟ್ಟಣದ ಮದ್ದೂರು ಮೆಡಿಕಲ್ ಸೆಂಟರ್ ನಲ್ಲಿ ತಾಲೂಕಿನ ಅಣ್ಣೂರು ಗ್ರಾಮದ ಮಹಿಳೆಯೋರ್ವರಿಗೆ ಸೂಕ್ತ ಚಿಕಿತ್ಸೆ ನೀಡದ ಪರಿಣಾಮ ರೋಗಿಯೊಬ್ಬರು ಮೃತಪಟ್ಟಿದ್ದಾರೆಂದು ಆರೋಪಿಸಿ ಮೃತ ಮಹಿಳೆಯ ಸಂಬಂಧಿಕರು ಹಾಗೂ ವಿವಿಧ ಪ್ರಗತಿಪರ ಸಂಘಟನೆಯವರು ಪಟ್ಟಣದ ಮದ್ದೂರು ಮೆಡಿಕಲ್ ಸೆಂಟರ್ ಆಸ್ಪತ್ರೆಯ ಮುಂದೆ ಬುಧವಾರ ರಾತ್ರಿ ಪ್ರತಿಭಟನೆ ಪ್ರತಿಭಟನೆ ನಡೆಸಿದರು.

ಈ ವೇಳೆ ಮಹಿಳೆಗೆ ಸೂಕ್ತ ಚಿಕಿತ್ಸೆ ನೀಡದ ವೈದ್ಯರು ಮತ್ತು ಸಿಬ್ಬಂದಿಯ ವಿರುದ್ಧ ಘೋಷಣೆಗಳನ್ನು ಬುಧವಾರ ಸಂಜೆ ಆಕ್ರೋಶ ವ್ಯಕ್ಯಪಡಿಸಿದರು.

ಘಟನೆಯ ವಿವರ : ತಾಲೂಕಿನ ಅಣ್ಣೂರು ಗ್ರಾಮದ ಸಿದ್ದಮ್ಮ(40) ಎಂಬ ಮಹಿಳೆ ಬುಧವಾರ ಮಧ್ಯಾಹ್ನ ಗಂಟಲು ನೋವು ಎಂದು ಚಿಕಿತ್ಸೆ ಪಡೆಯಲು ಮದ್ದೂರು ಮೆಡಿಕಲ್ ಸೆಂಟರ್ ಗೆ ಬಂದಿದ್ದಾರೆ,

ಆಗ ವೈದ್ಯರು ಸೂಕ್ತ ಚಿಕಿತ್ಸೆ ನೀಡದೆ ಆನಂತರ



ಅವರು ಚಿಕಿತ್ಸೆ ನೀಡಿದ ಸ್ವಲ್ಪ ಹೊತ್ತಲ್ಲೇ ಬೇಜಾವಾಬ್ದಾರಿತನ ಪ್ರದರ್ಶನ ಮಾಡಿದ ಹಿನ್ನೆಲೆಯಲ್ಲಿ ಮಹಿಳೆ ಮೃತ ಪಟ್ಟಿದ್ದಾರೆಂದು ಮೃತ ಮಹಿಳೆಯ ಸಂಬಂಧಿಕರು ಸೇರಿದಂತೆ ಪ್ರತಿಭಟನಾಕಾರರು ಆರೋಪಿಸಿದರು.

ಮೃತ ಮಹಿಳೆಯ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವವರೆಗೆ ಪ್ರತಿಭಟನೆ ಹಿಂಪಡೆಯಲ್ಲ ಎಂದು ಪಟ್ಟು ಹಿಡಿದು ಆಸ್ಪತ್ರೆಯ ಮುಂದೆ ಧರಣಿ ಕುಳಿತರು.

ಸ್ಥಳಕ್ಕೆ ತಹಸೀಲ್ದಾರ್ ಕೆ.ಎಸ್.ಸೋಮಶೇಖರ್, ತಾಲೂಕು ಆರೋಗ್ಯಾಧಿಕಾರಿ ರವೀಂದ್ರ ಬಿ.ಗೌಡ, ಸಿಪಿಐ ವೆಂಕಟೇಗೌಡ ಅವರು ಆಗಮಿಸಿ ಘಟನೆ ಸಂಬಂಧ ಮಾಹಿತಿ ಪಡೆದುಕೊಂಡರು.

ಆಸ್ಪತ್ರೆಯ ವೈದ್ಯರು ಹಾಗೂ ಮೃತ ಮಹಿಳೆಯರ ಸಂಬಂಧಿಕರು ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರ ನಡುವೆ ಕೆಲಕಾಲ ಮಾತುಕತೆ ನಡೆಸಿದರು.

ಅಂತಿಮವಾಗಿ ಮೃತ ಮಹಿಳೆಯ ಕುಟುಂಬಕ್ಕೆ 8 ಲಕ್ಷ ರೂ.ಪರಿಹಾರ ನೀಡುವುದಾಗಿ ಆಸ್ಪತ್ರೆಯ ಆಡಳಿತ ಮಂಡಳಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಮೃತ ಮಹಿಳೆಯ ಸಂಬಂಧಿಕರಾದ ಪಂಚೇಗೌಡ, ಪುಟ್ಟಲಿಂಗ, ಪುಟ್ಟಲಿಂಗಯ್ಯ, ನಂದನ, ಮಹೇಶ್, ಮುಖಂಡರಾದ ಉಮಾಶಂಕರ್,ಅಣ್ಣೂರು ಮಹೇಂದ್ರ, ಸೊ.ಶಿ.ಪ್ರಕಾಶ್, ನಾಗರಾಜು, ಉಮೇಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಿಂಗಪುರದಲ್ಲಿ ಆಯೋಜಿಸಿರುವ ಎರಡನೇ ವಿಶ್ವ ಕನ್ನಡದ ನಿರೂಪಕರಾಗಿ ರಶೀದ್ ನೇಮಕವಾಗಿದ್ದು, ವಿಶ್ವ ಕನ್ನಡ ಹಬ್ಬದ ಸರ್ವಾಧ್ಯಕ್ಷ ಡಾ. ಸಿ. ಸೋಮಶೇಖರ್ ರವರು ಆಯ್ಕೆ ಪತ್ರ ನೀಡಿ ಅಭಿನಂದನೆಗಳನ್ನು ತಿಳಿಸಿದರು. ರಶೀದ್ ರವರು ಅತ್ಯುತ್ತಮ ನಿರೂಪಕರಾಗಿ ಸಾವಿರಾರು ಉನ್ನತ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಇವರ ನಿರೂಪಣೆಗೆ ಬಹಳಷ್ಟು ಬೇಡಿಕೆ ಕೂಡ ಇದೆ. ಜೊತೆಗೆ ಕನ್ನಡ ಭಾಷೆಯನ್ನು ಸ್ವಚ್ಛವಾಗಿ ಮಾತನಾಡುವ ಕೌಶಲ್ಯ ಹೊಂದಿದ್ದಾರೆ. ಇಂತಹ ಪ್ರತಿಭೆಯನ್ನು ಈ ದಿನ ವಿಶ್ವ ಕನ್ನಡ ಹಬ್ಬಕ್ಕೆ ನಿರೂಪಕರಾಗಿ ನೇಮಕ ಮಾಡಲಾಗಿದ್ದು, ಅವರಿಗೆ ಸಂಸ್ಥೆ ಶುಭಾಶಯಗಳನ್ನು ತಿಳಿಸಲಿಚ್ಚಿಸುತ್ತಿದೆ ಎಂದು ಅಧ್ಯಕ್ಷ ಶಿವಕುಮಾರ್ ನಾಗರ ನವಿಲೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ದಿನೇಶ್ ಜೋಶಿ, ಶ್ರೀ ಹರ್ಷ ಅಶೋಕ್ ನೀಲಾಪಂತ, ಗಾಯಕ ಮೋಹನ್ ಕೃಷ್ಣ, ನಟಿ ರೂಪಿಕಾ, ರಂಜಿತಾ, ಸುಕೃತಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ಅಮಾಯಕರನ್ನು ವಂಚನೆ ಮಾಡುತ್ತಿದ್ದ ಖತರ್ನಾಕ್ ಕಳ್ಳ ಅರೆಸ್ಟ್

ಕೊರಟಗೆರೆ:– ಕೊರಟಗೆರೆ ಮೂಲದ ವ್ಯಕ್ತಿ ಓರ್ವ ಬೆಂಗಳೂರು ತುಮಕೂರು ಸೇರಿದಂತೆ ರಾಜ್ಯದ ಹಲವು ಕಡೆ ಕಡಿಮೆ ಬೆಲೆಗೆ ಸ್ಮಾರ್ಟ್ ಸಿಟಿಯಲ್ಲಿ ಸೈಟ್, ಮೆಡಿಕಲ್ ಸೀಟ್, ಸ್ಮಾಲ್ ಇಂಡಸ್ಟ್ರಿಯಲ್ ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿರುವ ಪ್ರಕರಣವೊಂದು ಕೊರಟಗೆರೆಯಲ್ಲಿ ಬೆಳಕಿಗೆ ಬಂದಿದೆ.

ಕೊರಟಗೆರೆ ಮೂಲದ ಮಹಮ್ಮದ್ ಝುಬೇರ್, ಪತ್ನಿ ರೋಹಿ ಜುಬೇರ್ ಹಾಗೂ ಮೊಹಮದ್ ಝುಬಿರ್ ಸ್ನೇಹಿತ ಸತೀಶ್ ಸೇರಿ ಬೆಂಗಳೂರು ಮೂಲದ ಸಾಯಿದ ತಬಸುಮ್ ಗೆಮೋಸ ಎಂಬುವವರಿಂದ 1 ಕೋಟಿ 20ಲಕ್ಷ ಹಣ 186 ಗ್ರಾಂ ಚಿನ್ನ ವಂಚನೆಯ ದೂರಿನ ಮೇರೆಗೆ ಮಹಮ್ಮದ್ ಝುಬೇರ್ ಮಡದಿ ರೋಹಿ ಜುಬೇರ್ ಹಾಗೂ ಸತೀಶ್ ಎಂಬುವರನ್ನು ಪೊಲೀಸ್ ಬಂಬಿಸಿದ್ದಾರೆ ಎನ್ನಲಾಗಿದೆ.



ಆರೋಪಿ ಮಹಮ್ಮದ್ ಬೆಂಗಳೂರಿನ ಕೆಂಗೇರಿ ನಿವಾಸಿ ಸಾಯಿದಾ ತಬಸುಮ್ ಗೆ ಮೋಸ ಎಂಬುವರ ಬಳಿ 1.5 ಕೋಟಿಗೂ ಹೆಚ್ಚು ಮೌಲ್ಯದ ನಗದು ಹಾಗೂ ಬಂಗಾರವನ್ನ ವಂಚಿಸಿದ ಪ್ರಕರಣ ಬೆನ್ನತ್ತಿದ ಕೆಂಗೇರಿ ಪೊಲೀಸ್ ಪಿಐ ಮುರಳಿ ನೇತೃತ್ವದ ತಂಡ ಅವರ ಮನೆ ಹಾಗೂ ಇಟ್ಟಿಗೆ ಫ್ಯಾಕ್ಟರಿಯ ಕಚೇರಿಯಲ್ಲಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಅಚ್ಚರಿಯ ಬೆಳವಣಿಗೆ ಮೂಡಿಬಂದಿದ್ದು ಆರೋಪಿ ಮೊಹಮ್ಮದ್ ಝುಬೀರ್ ಆತನ ಪತ್ನಿ ಹಾಗೂ ಸ್ನೇಹಿತ ಸೇರಿ ರಾಜ್ಯಪಾಲರ ಹಾಗೂ ಆರ್‌ಬಿಐ ಗೌರ್ನರ್ ಗಳ ಸಹಿ ನಕಲು ಮಾಡಿ ಕೋಟಿ ಕೋಟಿ ವಂಚನೆ ಸೇರಿದಂತೆ ಹಲವು ಇತರೆ ಪ್ರಕರಣಗಳಲ್ಲಿ ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಮಹಮ್ಮದ್ ಝುಬೇರ್ ಗೃಹ ಸಚಿವರ ಹೆಸರು ಹೇಳಿಕೊಂಡು ಕೆಲವು ಜನರನ್ನ ಯಾಮರಿಸಿದ್ದಾನೆ ಎನ್ನಲಾಗುತ್ತಿದ್ದು , ಕೆಂಗೇರಿ ಮೂಲದ ಪೊಲೀಸ್ ಠಾಣೆಯಲ್ಲಿ ಸಾಯಿದ ತಬಸುಮ್ ಗೆಮೋಸ ಎಂಬುವರು 1ಕೋಟಿ 20 ಲಕ್ಷ ನಗದು ಹಾಗೂ 186 ಗ್ರಾಂ ಚಿನ್ನ ಪಡೆದು ಅವರಿಗೆ ಯಾಮರಸಿರುವ ಪ್ರಕರಣ ಕೆಂಗೇರಿ ಪೊಲೀಸ್ ಠಾಣೆ ಮೆಟ್ಟಿಲೇರಿದ ಕಾರಣ ಕೊರಟಗೆರೆ ಮೂಲದ ಮಹಮ್ಮದ್ ಝುಬೇರ ತನಿಖೆ ನಡೆಸಿ ಆತನ ಮನೆ ಹಾಗೂ ಇಟ್ಟಿಗೆ ಫ್ಯಾಕ್ಟರಿ ಕಚೇರಿಯಲ್ಲಿ ಪರಿಶೀಲನೆ ನಡೆಸಿರುವ ಸಂದರ್ಭದಲ್ಲಿ ಹಲವು ಪ್ರಕರಣಕ್ಕೆ ಸಂಬಂಧಿಸಿದಂತ ದಾಖಲಾತಿಗಳು ದೊರಕಿದೆ ಎನ್ನಲಾಗಿದೆ.

ಒಟ್ಟಾರೆ ಕೊರಟಗೆರೆ ತಾಲೂಕಿನಲ್ಲಿ ದೊಡ್ಡಮಟ್ಟದ ಪ್ರಕರಣ ಒಂದು ಕೆಂಗೇರಿ ಪೊಲೀಸ್ ಠಾಣೆಯಿಂದ ಹೊರ ಬಿದ್ದಿದ್ದು, ಮುಂದಿನ ತನಿಖೆಯಿಂದ ಮತ್ತಷ್ಟು ಮೋಸದ ಪ್ರಕರಣ ಹೊರ ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ.

# ರಸ್ತೆ ಅಪಘಾತದಲ್ಲಿ ಹತ್ತಕ್ಕೂ ಹೆಚ್ಚು ಕುರಿಗಳು ಸಾವು

ಕೊರಟಗೆರೆ :– ರಸ್ತೆ ಬದಿಯಲ್ಲಿ ಹೋಗುತ್ತಿದ್ದ ಕುರಿಗಳ ಹಿಂಡಿಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ 10ಕ್ಕೂ ಹೆಚ್ಚು ಕುರಿಗಳು ದಾರುಣವಾಗಿ ಸಾವುಗೀಡಾದ ಘಟನೆ ಕೊರಟಗೆರೆ ತಾಲ್ಲೂಕ್ ವ್ಯಾಪ್ತಿಯಲ್ಲಿ ಜರುಗಿದೆ.

ಕೊರಟಗೆರೆ ತಾಲೂಕಿನ ಅಗ್ರಹಾರ ಗ್ರಾಮ ಪಂಚಾಯತಿ ವ್ಯಾಪ್ತಿಯ ಥರಟಿ ಗ್ರಾಮದ ಬಳಿ ಈ ಘಟನೆ ಜರುಗಿದ್ದು, ಅತಿ ವೇಗವಾಗಿ ಬರುತ್ತಿದ್ದ ಶ್ರೀ ವೆಂಕಟೇಶ್ವರ ಬಸ್ ಏಕಾಏಕಿ ಮುಂದೆ ಹೋಗುತ್ತಿದ್ದ ಕುರಿಗಳ ಮೇಲೆ ಹತ್ತಿದ ಪರಿಣಾಮ ಹೆಚ್ಚು ಕುರಿಗಳು ರಸ್ತೆಯಲ್ಲಿ ಚಿಲ್ಲಾ ಪಿಲಿಯಾಗಿ ಬಸ್ ನ ಚಕ್ರಕ್ಕೆ ಸಿಲುಕಿ ಹತ್ತಕ್ಕೂ ಹೆಚ್ಚು ಕುರಿಗಳು ದಾರುಣವಾಗಿ ಸಾವಿಗೀಡಾಗಿವೆ.

ರಸ್ತೆ ಅಪಘಾತದಲ್ಲಿ 10ಕ್ಕೂ ಹೆಚ್ಚು ಕುರಿಗಳನ್ನು ಕಳೆದುಕೊಂಡ ಥರಟಿ ಗ್ರಾಮದ ಮುದ್ದಮ್ಮ ಹಾಗೂ ತಿಮ್ಮಪ್ಪ ಎನ್ನುವ ಬಡ ರೈತ ಕುಟುಂಬದಗಳು ತಮ್ಮ ಜೀವನೋಪಾಯಕ್ಕಾಗಿ ಸಾಕಿದ್ದ ಕುರಿಗಳು ಸಾವಿಗಿಡಾಗಿದ್ದು ಕುರಿಗಳನ್ನು ಕಳೆದುಕೊಂಡ ರೈತರು ಲಕ್ಷಾಂತರ ರೂಪಾಯಿ ಮೌಲ್ಯದ ಕುರಿಗಳು



ರಸ್ತೆ ಅಪಘಾತದಲ್ಲಿ ಸಾವುಹಾಗಿರುವುದು ಸಾಲಾ ಸುಲಾ ಮಾಡಿ ಸಾಕಿದ ಕುರಿಗಳ ಮಾರಣಹೋಮದಿಂದ ರೈತರು ದಿಕ್ಕು ಕಾಣದಂತಾಗಿ ಪರಿಹಾರ ಕಲ್ಪಿಸಿ ಎಂದು ಗೋಗರೆದದ್ದು ಕಂಡು ಬಂತು. ಈ ಸಂಬಂಧ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಿಪಿಐ ಅನಿಲ್ ಕುಮಾರ್ ಹಾಗೂ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ ಎನ್ನಲಾಗಿದೆ.

# ಬಂಡೀಪುರ ಕೊಳೆತ ಸ್ಥಿತಿಯಲ್ಲಿ ಹುಲಿಯೊಂದರ ಮೃತ ದೇಹ ಪತ್ತೆ

ಗುಂಡ್ಲುಪೇಟೆ: ಕೊಳೆತ ಸ್ಥಿತಿಯಲ್ಲಿ ಹುಲಿಯೊಂದರ ಮೃತ ದೇಹ ಪತ್ತೆಯಾಗಿರುವ ಘಟನೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪ ವಿಭಾಗ ವ್ಯಾಪ್ತಿಯಲ್ಲಿ ನಡೆದಿದೆ.

ಮೃತ ಹುಲಿಯು 4 ವರ್ಷದ ಪ್ರಾಯದ್ದಾಗಿದ್ದು, ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿರುವುದರಿಂದ ಲಿಂಗ ಗುರುತಿಸಲು ಸಾಧ್ಯವಾಗಿಲ್ಲ.

ಅರಣ್ಯ ಸಿಬ್ಬಂದಿ ಗಸ್ತು ತಿರುಗುವಾಗ ಅರಣ್ಯ ಪ್ರದೇಶದ ಗಿಡಗಂಟಿಗಳ ಪೊದೆಯಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದ್ದು, ಹುಲಿಯು ವನ್ಯಜೀವಿಯ ಜೊತೆಗಿನ ಕಾದಾಟದಿಂದ ಸುಮಾರು 12ರಿಂದ 15 ದಿನಗಳ ಹಿಂದೆ ಸಾವನ್ನಪ್ಪಿರುವುದಾಗಿ ಇಲಾಖಾ ಪಶು ವೈದ್ಯಾಧಿಕಾರಿ ಡಾ.ವಾಸಿಂ ಮಿರ್ಜಾ ಮಾಹಿತಿ ನೀಡಿದರು.



ಹುಲಿಯ ಸಾವಿನ ಬಗ್ಗೆ ಹೆಚ್ಚಿನ ವಿವರ ಸಂಗ್ರಹಿಸುವ ಸಲುವಾಗಿ ಮೃತ ಹುಲಿಯ ಅಂಗಾಂಗಳನ್ನು ಸಂಗ್ರಹಿಸಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್.ಎಸ್ ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ, ಎನ್.ಬೇಗೂರು ವಲಯ ವಲಯ ಅರಣ್ಯಾಧಿಕಾರಿ ಮಂಜುನಾಥ ಡಿ ಬಾಗೇವಾಡಿ, ಗುಂಡ್ರೆ ವಲಯದ ವಲಯ ಅರಣ್ಯಾಧಿಕಾರಿ ಅಮೃತೇಶ್ ಬಿ.ಬಿ, ಇಲಾಖಾ ಪಶು ವೈದ್ಯಾಧಿಕಾರಿ ಡಾ.ವಾಸಿಂ ಮಿರ್ಜಾ ಹಾಗೂ ಇಲಾಖಾ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಮೃತ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿಯಾಮನುಸಾರ ಮೃತ ಹುಲಿಯನ್ನು ಕಟ್ಟಿಗೆ ಮೂಲಕ ಸುಡಲಾಯಿತು.



# ನಮ್ಮ ಆಡಳಿತ ಅವಧಿಯಲ್ಲಿ ಅಭಿವೃದ್ಧಿಗೆ ಬದ್ಧ. ನೂತನ ಉಪಾಧ್ಯಕ್ಷೆ ರುಕ್ಮಿಣಿ ದೇವರಾಜು

ಕೆ.ಆರ್.ಪೇಟೆ:ತಾಲೂಕಿನ ಕಿಕ್ಕೇರಿ ಹೋಬಳಿಯ ಆನೆಗೋಳ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಉಪಾಧ್ಯಕ್ಷೆಯಾಗಿ ರುಕ್ಮಿಣಿ ದೇವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಉಪಾಧ್ಯಕ್ಷ ಮಂಜುನಾಥ್ ರವರ ರಾಜೀನಾಮೆಯಿಂದ ತೆರವಾದ ಉಪಾಧ್ಯಕ್ಷರ ಸ್ಥಾನ ಬಯಸಿ ರುಕ್ಮಿಣಿ ದೇವರಾಜು ಹೊರತುಪಡಿಸಿ ಉಳಿದ ಯಾವ ಸದಸ್ಯರೂ ಕೂಡ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಭರತ್



ಕುಮಾರ್ ಘೋಷಣೆ ಮಾಡಿದರು.

ನೂತನ ಉಪಾಧ್ಯಕ್ಷರನ್ನ ಅಭಿನಂದಿಸಿ ಮಾತನಾಡಿದ ಹೇಮಾವತಿ ಸಕ್ಕರೆ ಕಾರ್ಖಾನೆ ನಿರ್ದೇಶಕ ಎ.ಆರ್ ಮಂಜುನಾಥ್ ಸಂಘದ ಅಭಿವೃದ್ಧಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.ಸಂಘದ ಗುಣಮಟ್ಟದ ಬಗ್ಗೆ ತಿಂಗಳಿಗೊಮ್ಮೆ ಸಭೆ ನಡೆಸಿ ಚರ್ಚಿಸಿ ಸಂಘದ ಅಭಿವೃದ್ಧಿಯ ಕಡೆ ಹೆಚ್ಚಿನ ಗಮನಹರಿಸಬೇಕು.ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡಲು ಸಂಘ ಹಾಗೂ ಹಾಲು ಉತ್ಪಾದಕರು ಅಭಿವೃದ್ಧಿ ಹೊಂದಲು ಸಹಕರಿಸಬೇಕು.ಸಂಘದಲ್ಲಿ ಯಾವುದೇ ಕಾರಣಕ್ಕೂ ರಾಜಕಾರಣ ಬೆರಸದೇ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದ್ದಲ್ಲದೇ ಸಂಘವನ್ನು ಉಳಿಸಲು ಬೆಳಸಲು ಗ್ರಾಮದ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ನೂತನ ಉಪಾಧ್ಯಕ್ಷೆ ರುಕ್ಮಿಣಿ ದೇವರಾಜುಮಾತನಾಡಿ ಸಂಘಕ್ಕೆ ನೂತನವಾಗಿ ಅವಿರೋಧವಾಗಿ ಉಪಾಧ್ಯಕ್ಷರಾಗಲು ಅವಕಾಶ ಮಾಡಿಕೊಟ್ಟ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರಿಗೆ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸಿದರು.ಸಂಘದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ.ಸಂಘವನ್ನು ಅಭಿವೃದ್ಧಿ ಪಡಿಸಲು ನಾನೊಬ್ಬನಿಂದಲೇ ಸಾಧ್ಯವಿಲ್ಲ.ಸಂಘದ ಆಡಳಿತ ಮಂಡಳಿ ಹಾಗೂ ಇಡೀ ಗ್ರಾಮದ ಹಾಲು ಉತ್ಪಾದಕರು ಸಹಕಾರ ನೀಡಿದರೆ ಸಂಘವು ತಾನಾಗಿಯೇ ಅಭಿವೃದ್ಧಿ ಪಥದತ್ತ ಸಾಗುತ್ತದೆ ಎಂದರಲ್ಲದೇ ಹಾಲು ಉತ್ಪಾದಕರು ಎಂದಿನಂತೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ರಕ್ಷಿತ್ ಪಿ,ನಿರ್ದೇಶಕರಾದ ನಾಗಣ್ಣ, ಕೆಂಗಮ್ಮ, ನಾಗರಾಜು, ಮಂಜುನಾಥ್,ಜಗದೀಶ್, ಚನ್ನಕೇಶವ, ಸಂತೋಷ,ಪುಟ್ಟರಾಜು ಜೆ,ಗ್ರಾಮದ ಮುಖಂಡರು ಸೇರಿದಂತೆ ಉಪಸ್ಥಿತರಿದ್ದರು. ಸುದ್ದಿಯೊಂದಿಗೆ ಮನು ಮಾಕವಳ್ಳಿ ಕೆ ಆರ್ ಪೇಟೆ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
17 FRIDAY MAY 2024
17 ಶುಕ್ರವಾರ ಮೇ 2024

# ಮಾನಸ ಶಾಲೆಯ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ

ಮದ್ದೂರು ಸ್ಪರ್ಧಾತ್ಮಕ ಜಗತ್ತಿಗೆ ತಕ್ಕಂತೆ ವಿದ್ಯಾರ್ಥಿಗಳು ಕಠಿಣ ಪರಿಶ್ರಮಪಟ್ಟು ಅಣಿಯಾಗುವ ಮೂಲಕ ಜೀವನದಲ್ಲಿ ಅತ್ಯುನ್ನತ ಸಾಧನೆ ಮಾಡಿ ಪಾಲಕರಿಗೆ ಹಾಗೂ ಶಿಕ್ಷಕರಿಗೆ ಕೀರ್ತಿ ತರಬೇಕು ಎಂದು ಬೆಸಗರಹಳ್ಳಿ ಮಾನಸ ವಿದ್ಯಾಸಂಸ್ಥೆಯ ಅಧ್ಯಕ್ಷ ವಿ.ಕೆ.ಜಗದೀಶ್ ಸಲಹೆ ನೀಡಿದರು.

ತಾಲೂಕಿನ ಮಾನಸ ವಿದ್ಯಾಸಂಸ್ಥೆಯಲ್ಲಿ ಪ್ರಸಕ್ತ ವರ್ಷದ ಎಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು. ಪರೀಕ್ಷೆ ವಿದ್ಯಾರ್ಥಿಗಳು ಜೀವನದಲ್ಲಿ ಪ್ರಮುಖ ಘಟ್ಟವಾಗಿದ್ದು ಇದನ್ನರಿತು ಕಷ್ಟಪಟ್ಟು ಓದಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು



ತೇರ್ಗಡೆಗೊಂಡಿರುವುದು ಸಂತಸ ತಂದಿದೆ ಎಂದು ವಿದ್ಯಾರ್ಥಿಗಳು ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಮ್ಮ ಶಾಲೆಗೆ 2023–24 ನೇ ಸಾಲಿನಲ್ಲಿ ಸಿ ಸಿಬಿಎಸ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ ಹಾಗೂ ಪರೀಕ್ಷೆಯಲ್ಲಿ ಶೇ.92 ರಷ್ಟು ಫಲಿತಾಂಶ ಬಂದಿದೆ. ಗ್ರಾಮಾಂತರ ಪ್ರದೇಶದಲ್ಲಿರುವ ಮಾನಸ ವಿದ್ಯಾಸಂಸ್ಥೆಯಲ್ಲಿ ಓದಿದ ಗ್ರಾಮೀಣಾ ಭಾಗದ ಸಾವಿರಾರು ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಿ ಅತ್ಯುನ್ನತ ಹುದ್ದೆಯಲ್ಲಿರುವುದು ಸಂಸ್ಥೆಯ ಹಿರಿಮೆಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ನಕಲು ಮಾಡಲು ಬಿಡುವುದಿಲ್ಲ. ಸಿಸಿ ಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯುತ್ತಿದೆ. ಪರೀಕ್ಷೆಯನ್ನು ಲಘುವಾಗಿ ಪರಿಗಣಿಸದೆ ನಿರಂತವಾಗಿ ವ್ಯಾಸಂಗ ಮಾಡುವ ಮೂಲಕ ಉತ್ತಮ ಅಂಕಗಳಿಸಿ ತೇರ್ಗಡೆಯಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಮಂಡ್ಯ ವಿಶ್ವ ವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ರಾಜು ವಿದ್ಯಾರ್ಥಿಗಳು ವಿಶೇಷ ಉಪನ್ಯಾಸ ನೀಡಿದರು.

ಸಂಸ್ಥೆಯ ಖಜಾಂಚಿ ಸನತ್ ಕುಮಾರ್, ಪ್ರಾಂಶುಪಾಲ ಪ್ರವೀಣ್ ಕುಮಾರ್, ಮುಖ್ಯ ಶಿಕ್ಷಕರಾದ ರಮೇಶ್, ಶರತ್, ಬಸವರಾಜ್, ಪಲ್ಲವಿ, ಕುಮಾರ್ ಇದ್ದರು.

## ಸ್ಥಳೀಯ

ಇ-ಪೇಪರ್: www.munjaneevartheepaper.com



ಮಲೇಷಿಯಾ, ವಿಯೆಟ್ನಾಂ, ಸಿಂಗಾಪುರ, ಅಮೇರಿಕಾ, ದುಬೈ, ಯುಎಇ ಮುಂತಾದ ರಾಷ್ಟ್ರಗಳಲ್ಲಿ ಹೆಸರುವಾಸಿಯಾಗಿರುವ ಕರ್ನಾಟಕದ ಹೆಮ್ಮೆಯ ನಂದಿನಿ ಸಂಸ್ಥೆ ಈಗ ಟಿ20 ವಿಶ್ವಕಪ್ ಪಂದ್ಯಕೂಟದಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳ ಪ್ರಾಯೋಜಕತ್ವ ಪಡೆದಿದೆ.

ರಾಜ್ಯದ ಉತ್ಕೃಷ್ಟ ಗುಣಮಟ್ಟದ ಹಾಲಿನ ಉತ್ಪನ್ನಗಳು ಮತ್ತು ನಾಡಿನ ರೈತರ ಶ್ರಮವೆರಡನ್ನೂ ವಿಶ್ವಕ್ಕೆ ಪರಿಚಯಿಸುವ ಸಂಕಲ್ಪ ನಮ್ಮದು. ನಂದಿನಿಯನ್ನು ಜಾಗತಿಕ ಬ್ರಾಂಡ್ ಆಗಿ ರೂಪಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಲಿದೆ.

ಈ ಬಾರಿ ವಿಶ್ವಕಪ್‌ನಲ್ಲಿ ರಾರಾಜಿಸಲಿದೆ ನಂದಿನಿ, ಕಂಗೊಳಿಸಲಿದೆ ಕನ್ನಡ.



ಮುಂಜಾನೆ ವಾರ್ತೆ. ಸುದ್ದಿ. ಮುದ್ದೇಬಿಹಾಳ: ತಾಲೂಕಿನ ಆಲಕೊಪ್ಪರ ಗ್ರಾಮದ ಹೊರವಲದ ಸಾರ್ವಜನಿಕ ಶೌಚಗ್ರಹ ಹತ್ತಿರವಿರುವ ಚರಂಡಿ ಅನಾಥ ನವಜಾತಿ ಶಿಶುವಿಗೆ ಜನ್ಮ ನೀಡಿದ ಪಾಪಿಗಳು ಶಿಶುವನ್ನು ಬಟ್ಟೆಯಲ್ಲಿ ಸುತ್ತಿ ಎಸೆದು ಹೋದ ಅಮಾನವಿಯ ಘಟನೆ ಗುರುವಾರ ಬೆಳಗಿನ ಜಾವ ಕಂಡು ಬಂದಿದೆ.

ಆಲಕೊಪ್ಪರ ಗ್ರಾಮದ ಮಹಿಳೆಯರು ಬೆಳಿಗ್ಗೆ ಬಹಿರ್ದೇಸೆಗೆ ಹೋಗುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕಂಡು ಬಂದಿದ್ದು ಆಗಲೇ ಆಶಿಶು ಪ್ರಾಣ ಬಿಟ್ಟಿದ್ದನ್ನು ಗಮನಿಸಿದ ಗ್ರಾಮಸ್ಥರು ಮುದ್ದೇಬಿಹಾಳ ಪಟ್ಟಣದ ಸಿಡಿಪಿಓ ಇಲಾಖೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಬಳಿಕ ಮಾಹಿತಿ ಆದಾರದ ಮೇಲೆ ಸಿಡಿಪಿಓ ಚಂದ್ರಕಾಂತ ಕುಂಬಾರ, ಪಿಎಸೈ ಸಂಜಯ ತಿಪ್ಪಾರೇಡ್ಡಿ ಅವರು ಸ್ಥಳಕೆ ಬೇಟಿ ನೀಡಿ ಪರಿಶಿಲನೇ ನಡೆಸಿ ಸ್ಥಳಿಯ ಪೋಲಿಸ್ ಠಾಣೆಯಲ್ಲಿ ಸಾರ್ವಜನಿಕ ದೂರು ಪ್ರಕಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ.ಈ ವೇಳೆ ಸಿಡಿಪಿಓ ಚಂದ್ರಕಾಂತ ಕುಂಬಾರ ಅವರು ಮಾತನಾಡಿ ಇದೋಂದು ಅಮಾನವಿಯ ಘಟನೆ ಎಷ್ಟೋ ಜನರಿಗೆ ಮಕ್ಕಳು ಇಲ್ಲವೆಂದು ಕೊರುಗುತ್ತಿದ್ದಾರೆ. ಆದರೇ ಅನೈತಿಕ ಸಂಬಂಧದಿಂದಲೋ ಅಥವಾ ದುರುದ್ದೇಶದಿಂದಲೋ ಈ ರೀತಿ ಕೃತ್ಯವೆಸಗಿರುವುದು ತನಿಖೆಯಿಂದ ಗೊತ್ತಾಗಲಿದೆ ಸಧ್ಯಕ್ಕೆ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

# ಪಟ್ಟಣದ ಚಿಕನ್ ಕಬಾಬ್ ಅಂಗಡಿಗಳ ಮೇಲೆ ದಾಳಿ

ತಿ.ನರಸೀಪುರ.ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ತಾಲ್ಲೂಕು ಅಧಿಕಾರಿ ಸುಮಂತ್ ನೇತೃತ್ವದಲ್ಲಿ ಪಟ್ಟಣದ ಚಿಕನ್ ಕಬಾಬ್ ಅಂಗಡಿಗಳ ಮೇಲೆ ದಾಳಿ ನಡೆಸಿ ಮಾದರಿ ಸಂಗ್ರಹಿಸಿ ಕೃತಕ ಬಣ್ಣ ಬಳಸದಂತೆ ಎಚ್ಚರಿಕೆ ನೀಡಿದರು.

ಪಟ್ಟಣದ ಶಿಕ್ಷಣ ಇಲಾಖೆ ಪಕ್ಕದ ಹುಲ್ಲಹಳ್ಳಿ ನಾಲೆ ರಸ್ತೆಯಲ್ಲಿ ವ್ಯಾಪಾರ ಮಾಡುವ ಚಿಕನ್ ಕಬಾಬ್ ಸೆಂಟರ್ ಗಳ ಮೇಲೆ ದಾಳಿ ಮಾಡಿದ ಆಹಾರ ಸುರಕ್ಷತೆ ಅಧಿಕಾರಿ ಸುಮಂತ್ ಸುಮಾರು ಎಂಟು ( 8) ಚಿಕನ್ ಕಬಾಬ್ ಸೆಂಟರ್ ಗಳಿಂದ ಮಾದರಿ (ಸ್ಯಾಂಪಲ್) ಹಾಗೂ ಸ್ಥಳದಲ್ಲಿ ಇಟ್ಟುಕೊಂಡಿದ್ದ ಕೃತಕ ಬಣ್ಣಗಳನ್ನು ಸಂಗ್ರಹಿಸಿ ಕೊಂಡರು.



ದಾಳಿ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಆಹಾರ ಸುರಕ್ಷತೆ ಅಧಿಕಾರಿ ಸುಮಂತ್ ಚಿಕನ್ ಕಬಾಬ್ , ಗೋಬಿ ಮಂಚೂರಿ,ಕಾಟನ್ ಕ್ಯಾಂಡಿ ಸೇರಿದಂತೆ ಕೆಲವೊಂದು ಆಹಾರ ಪದಾರ್ಥಗಳಿಗೆ ದಟ್ಟ ಮತ್ತು ಆಕರ್ಷಕ ಬಣ್ಣ ಬರಲು ರೋಡಮೈನ್ ಬಿ ಹಾಗೂ ಟಾರ್ ಟ್ರಾಸೈನ್, ಸನ್‌ಸೆಟ್ ಯೆಲ್ಲೊ ಮತ್ತು ಕಾರ್ಮೋಸಿನ್ ಬಳಸುತ್ತಾರೆ ಇದು ಆರೋಗ್ಯಕ್ಕೆ ಅಪಾಯಕಾರಿ ಇದನ್ನು ಆಹಾರದಲ್ಲಿ ಬಳಸದಂತೆ ನಿಷೇದಿಸಿ ಸರ್ಕಾರ

ಆದೇಶ ಮಾಡಿದೆ ಆದರೂ ಸಹ ವ್ಯಾಪರಗಾರರು ಚಿಕನ್ ಕಬಾಬ್ ಆಕರ್ಷಕ ಬಣ್ಣ ಹೊಂದಲೂ ಈ ವಿಷಕಾರಿ ಬಣ್ಣ ಬಳಸುತ್ತಿದ್ದಾರೆ ಹಾಗಾಗಿ ಪಟ್ಟಣದ ಹಲವೆಡೆ ಚಿಕನ್ ಕಬಾಬ್ ಸೆಂಟರ್ ಮೇಲೆ ದಾಳಿ ಮಾಡಲಾಗಿದೆ ಎಂದರು.

ದಾಳಿ ಮಾಡಿದ ವೇಳೆ ಚಿಕನ್ ಕಬಾಬ್ ಸೆಂಟರ್ ಗಳಿಂದ ಬಣ್ಣ ಹಾಕಲಾಗಿದೆ ಎನ್ನಲಾದ ಚಿಕನ್ ಕಬಾಬ್ ಸ್ಯಾಂಪಲ್ ಸಂಗ್ರಹ ಮಾಡಲಾಗಿದೆ ಇದನ್ನು ಉನ್ನತ ಅಧಿಕಾರಗಳ ಆದೇಶದಂತೆ ಪ್ರಯೋಗಾಲಕ್ಕೆ ಕಳಿಸಿ ಪರೀಕ್ಷೆ ಮಾಡಿಸಲಾಗುವುದು ಒಂದು ವೇಳೆ ಚಿಕನ್ ಕಬಾಬ್ ಗೆ ಕೃತಕ ಬಣ್ಣ ಬಳಸಲಾಗಿದೆ ಎಂಬ ವರದಿ ಬಂದರೆ ಅಂತವರ ಮೇಲೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ರ ನಿಯಮ 59 ರಡಿ ಕ್ರಮವಹಿಸ ಲಾಗುವುದು ಎಂದರು ಅಲ್ಲದೆ ಚಿಕನ್ ಕಬಾಬ್,ಗೋಬಿ ಮಂಚೂರಿ, ಪಾನಿಪುರಿ ತಯಾರಿಕರು, ಮಾರಟಗಾರರಿಗೆ ಕೃತಕ ಬಣ್ಣ ಬಳಸಿದರೆ ಆರೋಗ್ಯದ ಮೇಲೆ ಬೀರುವ ಅಪಾಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರವನ್ನು ಹಮ್ಮಿಕೊಳ್ಳಲಾಗುವುದು ಎಂದರು.

"ಕೃತಕ ಬಣ್ಣಗಳನ್ನು ಬಳಸಿರುವ ತಿಂಡಿ– ತಿನಿಸುಗಳನ್ನು ದೀರ್ಘಕಾಲ ಬಳಸುವುದರಿಂದ ಮಕ್ಕಳೂ ಸೇರಿದಂತೆ ಬಳಕೆದಾರರು ಕಾನ್ಸರ್ ಸೇರಿದಂತೆ ಇನ್ನಿತರ ಮಾರಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ಕೃತಕ ಬಣ್ಣ ಬಳಸಿ ತಯಾರಿಸುವ ತಿಂಡಿ ತಿನಿಸುಗಳನ್ನು ಸಾರ್ವಜನಿಕರು ಸೇವಿಸಬಾರದು ಹಾಗೂ ಯಾರಾದರೂ ಕೃತಕ ಬಣ್ಣ ಬಳಸಿ ತಿಂಡಿಗಳನ್ನು ಮಾರಟ ಮಾಡುತ್ತಿದ್ದರೆ ಅಂತಹವರ ಬಗ್ಗೆ

94495 05104 ಈ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬಹುದು"

ಸುಮಂತ್ ಆಹಾರ ಸುರಕ್ಷತೆ ಅಧಿಕಾರಿ




ಹೊಸನಗರ : ಮಲೆನಾಡ ಹಚ್ಚ ಹಸಿರಿನ ನಡುವೆ ಚಿತ್ರೀಕರಣಗೊಂಡ "ಅರ್ಜುನ "ಸಿನಿಮಾ ಇದೆ.18,19,20, ರಂದು ಹೊಸನಗರದ ಈಡಿಗರ ಭವನದಲ್ಲಿ 2 ಪ್ರದರ್ಶನ ಇದೆ.ಹೊಸನಗರ ತಾಲೂಕಿನ ಯುವ ಪ್ರತಿಭೆಗಳು ಸೇರಿ ಮಾಡಿರುವ ಚಿತ್ರ ಇದಾಗಿದ್ದು. ಈ ಚಿತ್ರಕ್ಕೆ" ಶ್ರೀಧರ್ ರಂಗಾಯಣ ನಿರ್ದೇಶನವಿದೆ. ಹೊಸನಗರ ತಾಲೂಕಿನ ಕಲಾವಿದರಾದ ವೈಷ್ಣವಿ ನಾಡಿಗ್. ಅಕ್ಷತಾ ಕುಮಟಾ. ಯತೀಶ್ ಕೊಳ್ಳೇಗಾಲ. ಮೇಘರಾಜ್. ವೆಂಕಟೇಶ್ ಕೋಟೆ. ದತ್ತ. ಚಿತ್ರ-ಕಥೆ. ಅಜಿತ್ ಹರಿಸಿ.ಸಾಹಿತ್ಯ - ಶ್ರೀಧರ್ ರಂಗಾಯಣ.ನಿರ್ಮಾಪಕ : ಆದರ್ಶ ರಾವ್.

## ನರೇಗಾ ಕಾಮಗಾರಿ: ಜಿಪಂ ಸಿಇಓ ಅವರಿಂದ ವಿವಿಧೆಡೆ ಭೇಟಿ, ವೀಕ್ಷಣೆ

ಬಳ್ಳಾರಿ: ತಾಲ್ಲೂಕಿನ ವಿವಿಧ ಗ್ರಾಮಗಳ ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಗುರುವಾರ ವೀಕ್ಷಣೆ ಮಾಡಿದರು.

ಬಳ್ಳಾರಿ ತಾಲ್ಲೂಕಿನ ಬೈರದೇವನಹಳ್ಳಿ ಗ್ರಾಮದಲ್ಲಿ ಕೈಗೊಂಡಿರುವ ಸಿಸಿ ಚರಂಡಿ ಕಾಮಗಾರಿ ವೀಕ್ಷಣೆ ನಡೆಸಿ, ಕಾಮಗಾರಿ ಗುಣಮಟ್ಟತೆ ಕಾಯ್ದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ಶಿವಪುರ ಗ್ರಾಮದಲ್ಲಿ ಅರಣ್ಯ ಇಲಾಖೆಯ ನರ್ಸರಿ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೋಕಾದಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿ ವೀಕ್ಷಿಸಿದರು. ಪರಮದೇವನಹಳ್ಳಿ ಗ್ರಾಮದಲ್ಲಿ ಸ್ಮಶಾನ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು. ಈ ವೇಳೆ ಬಳ್ಳಾರಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಡಗಿನ ಬಸಪ್ಪ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಹಾಯಕ ನಿರ್ದೇಶಕ ಬಸವರಾಜ ಸೇರಿದಂತೆ ಅನುಷ್ಠಾನ ಇಲಾಖೆಯ ಅಧಿಕಾರಿಗಳು, ಟಿಸಿ, ಟಿಐಇಸಿ, ಟಿಎಂಐಎಸ್, ಪಿಡಿಓ, ಟಿಎಇ, ಡಿಇಓ, ಬಿಎಫ್‌ಟಿ, ಗ್ರಾಮ ಕಾಯಕ ಮಿತ್ರರು ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

# ಜಂಟಿ ಸರ್ವೆ ಆಗುವ ತನಕ ಹಿರೀಕಾಟಿಯಲ್ಲಿ ಗಣಿಗಾರಿಕೆ ಸ್ಥಗಿತ ಗೊಳಿಸಿ ಇಲ್ಲದಿದ್ದರೆ ಉಗ್ರ ಹೋರಾಟ: ಡಿ.ಎಸ್.ಎಸ್.ರಾಜಣ್ಣ

ಚಾಮರಾಜನಗರ. ಗುಂಡ್ಲುಪೇಟೆ ತಾಲ್ಲೂಕಿನ ಹಿರೀಕಾಟಿ ಗ್ರಾಮದ ಸರ್ವೆ ನಂ. 108 ರಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರಿಗೆ ಸೇರಿದ 2 ಎಕರೆ ಸ್ಮಶಾನ ಜಾಗದಲ್ಲಿ ಜಂಟಿ ಸರ್ವೆ ಮಾಡುವ ತನಕ ಗಣಿಗಾರಿಕೆ ಸ್ಥಗಿತಗೊಳಿಸಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ರೈತ ಕೂಲಿ ಸಂಗ್ರಾಮ ಸಮಿತಿ ಜಿಲ್ಲಾಧ್ಯಕ್ಷ ಎಂ.ಶಿವಣ್ಣ ಕಂದೇಗಾಲ ಹಾಗೂ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಎಚ್ಚರಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಗುಂಡ್ಲುಪೇಟೆ ತಾಲ್ಲೂಕಿನ ಹಿರೀಕಾಟಿ ಗ್ರಾಮದ ಸರ್ವೆ ನಂ. 108 ರಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರಿಗೆ 1997–98ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ಅಧಿಕೃತವಾಗಿ 2 ಎಕರೆ ಜಾಗವು ಸ್ಮಶಾನಕ್ಕಾಗಿ ಮಂಜೂರಾಗಿರುತ್ತದೆ. ಅಲ್ಲದೇ ಈ ಸ್ಮಶಾನ ಜಾಗದಲ್ಲಿ ಪ್ರಾರಂಭದಿಂದಲೂ ಶವಸಂಸ್ಕಾರ ಅಂತ್ಯಕ್ರಿಯೆ ಇಂದಿಗೂ ನಡೆದುಕೊಂಡು ಬಂದಿದೆ. ಮುಂದುವರೆದು ಈ ಸ್ಮಶಾನ ಜಾಗವನ್ನು ಅಭಿವೃದ್ಧಿಪಡಿಸಲು ಹೊರೆಯಾಲ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ. ಹೀಗಿರುವಾಗ ಈ ಸ್ಮಶಾನ ಜಾಗದಲ್ಲಿ ಗಣಿಗುತ್ತಿಗೆದಾರರಾದ ಗೀತಾ ಗಣೇಶ್ (ಗುತ್ತಿಗೆ ಸಂಖ್ಯೆ 153) 3 ಎಕರೆ ಜಾಗ ಮತ್ತು ಗಾಯಿತ್ರಿಪುಟ್ಟಣ್ಣ (ಗುತ್ತಿಗೆ ಸಂಖ್ಯೆ 150) 2 ಎಕರೆ ದೇಶದಲ್ಲಿ ಗಣಿಗಾರಿಕೆ ಮಾಡುತ್ತ ಬಂದಿರುವುದುಂಟು. ಇದಲ್ಲದೇ ಪರಿಶಿಷ್ಟಜಾತಿಯ ಸ್ಮಶಾನ ಜಾಗದಲ್ಲಿ ಈ ಗುತ್ತಿಗೆದಾರರು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತ ಬಂದಿದ್ದಾರೆ.



ಆದರೆ ಗಣಿ ಇಲಾಖೆಯ ತಿ–ನಿಯಮ/ಷರತ್ತುಗಳಲ್ಲಿ ಯಾವುದೇ ಸ್ಮಶಾನ ಜಾಗದಿಂದ 200 ಮೀಟರ್ ದೂರದಲ್ಲಿ ಮಾತ್ರ ಗಣಿಗಾರಿಕೆ ಮಾಡುವ ಅವಕಾಶವಿದೆ. ಹೀಗಿರುವಾಗ ಈ ಗಣಿಗುತ್ತಿಗೆದಾರರು ಜಿಲ್ಲಾ ಪೋರ್ಸ್ ಕಮಿಟಿಯ (ಗಣಿ) ನಿಯಮಗಳನ್ನು ಉಲ್ಲಂಘಿಸಿ ಸ್ಮಶಾನ ಪಕ್ಕದಲ್ಲಿ ಅಕ್ರಮ ಗಣಿಗಾರಿಕೆ ಮಾಡಿದ್ದಾರೆ.

ಹೀಗಿರುವಾಗ ಗೀತಾಗಣೇಶ್ ಮತ್ತು ಗಾಯಿತ್ರಿಪುಟ್ಟಣ್ಣ ಇವರು ನಾವು ಬ್ಯಾಂಕಿನಿಂದ 1 ಕೋಟಿ 50 ಲಕ್ಷ –ವಿದೆ ಮತ್ತು ನಮ್ಮ ಹತ್ತಿರ 70 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂದು ಸುಳ್ಳು ಪತ್ರಗಳನ್ನು ಗಣಿ ಇಲಾಖೆಗೆ ಕೊಟ್ಟಿರುತ್ತಾರೆ. ಇದು ಸರಿಯೇ ಇಲ್ಲವೋ ಎಂದು ಪ್ರಾಮಾಣಿಕವಾಗಿ ತನಿಖೆ ಮಾಡದೇ ನಿರ್ದೇಶಕರಾದ ಪದ್ಮಜರವರು ಗುತ್ತಿಗೆದಾರರು ಆಸೆ–ಆಮಿಷಗಳ ಒತ್ತಡಕ್ಕೆ ಬಲಿಯಾಗಿ 11–12–2023 ರಂದು ಗಣಿಗಾರಿಕೆ ಸ್ಥಗಿತ ಮಾಡುವಂತೆ ನೀಡಿದ್ದ ಆದೇಶವನ್ನು ಹಿಂಪಡೆದು ಮತ್ತೆ ಪರಿಶಿಷ್ಟಜಾತಿಯ ಸ್ಮಶಾನವಿರುವ ದಲ್ಲಿ ಗಣಿಗಾರಿಕೆ ಮಾಡಲು ಅನುಮತಿ ನೀಡಿದ್ದಾರೆ.

ಈ ಹಿನ್ನಲೆಯಲ್ಲಿ ಉಪನಿರ್ದೇಶಕರಾದ ಪದ್ಮಜರವರು ಪರಿಶಿಷ್ಟಜಾತಿಯವರಿಗೆ ಮೀಸಲಾಗಿರುವ ಸ್ಮಶಾನ ಜಾಗದಲ್ಲಿ ಈ ಹಿಂದೆ ಜಂಟಿ ಸರ್ವೆಯಾಗುವ ತನಕ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲು ಆದೇಶಿಸಿತ್ತು ಆದರೆ ಈಗ ಗಣಿಗಾರಿಕೆಯನ್ನು ಮಾಡಲು ಅನುಮತಿ ನೀಡಿರುವುದನ್ನು ಹಿಂಪಡೆಯಬೇಕು ಈ ರೀತಿಯಾಗಿ ದಲಿತ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಉಪನಿರ್ದೇಶಕರ ವಿರುದ್ಧ ಸೂಕ್ತ ತನಿಖೆ ಮಾಡಿ ಕಾನೂನುಕ್ರಮಕೈಗೊಳ್ಳಬೇಕು ಎಂದು ರೈತ ಸಂಗ್ರಾಮ ಸಮಿತಿ ಅಧ್ಯಕ್ಷ ಎಂ.ಶಿವಣ್ಣ ಕಂದೇಗಾಲ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ರಾಜಣ್ಣ ಯರಿಯೂರು ಜಂಟಿಯಾಗಿ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಕೂಲಿ ಸಂಗ್ರಾಮ ಸಮಿತಿ ಜಿಲ್ಲಾ ಕಾರ್ಯದರ್ಶಿ ಪ್ರಸನ್ನಕುಮಾರ್, ಡಿಎಸ್ ಎಸ್ ಚಾಮರಾಜನಗರ ತಾಲೂಕು ಅಧ್ಯಕ್ಷ ಗೂಳಿಪುರ ಅನಿಲ್ ಕುಮಾರ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮೈಸೂರು ಜಿಲ್ಲಾ ಉಪಾಧ್ಯಕ್ಷ ಬಿ.ಬಸವರಾಜು ಹೆಚ್.ಡಿ.ಕೋಟೆ ಹಾಜರಿದ್ದರು.

ವರದಿ ಆರ್ ಉಮೇಶ್ ಮಲಾರಪಾಳ್ಯ

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: **91414 14119** Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085